ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ. ಸಿಲ್ಟ್ ಎಲ್ಲೆಲ್ಲಿ ಇದೆ ಅದನ್ನು ತೆಗೆಸುವುದಕ್ಕೆ estimate ಮಾಡದೆ ನಾನು ಹೇಳುವುದಕ್ಕೆ ಬರುವುದಿಲ್ಲ. ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ : ಆನ್ಯ ಅಧ್ಯಕ್ಷರೆ, ಸಿಲ್ಟ್ ತೆಗೆಯುವುದರ ಬಗ್ಗೆ, ಜಾಲಿ ತೆಗೆಯುವ ಬಗ್ಗೆ ತೀರ್ಮಾನ ತೆಗೆದುಕೊಂಡು ಪ್ರಾರಂಭ ಮಾಡುತ್ತೇನೆಂದು ಹೇಳಿದ್ದಾರೆ. ನಾನು ಅದನ್ನು ಅಭಿನಂದಿಸುತ್ತೇನೆ. ಆದರೆ ಅಲ್ಲಿರುವಂತಹ ಬಳ್ಳಾರಿ ಜಾಲಿಯನ್ನು ಮೇಲಿನಿಂದ ಕಟ್ ಮಾಡಬಾರದು. ಬೇರು ಸಹಿತ ಕಿತ್ತೊಗೆಯಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು : ಬಂಡೆಪ್ಪ ಖಾಶೆಂಪೂರ್.. ಮಾತನಾಡುವುದಿಲ್ಲವಾ? ಮಾನ್ಯ ಎಂ.ಬಿ. ಪಾಟೀಲ್, ನೀವು ಮಾತನಾಡಿ.

3) ವಿಷಯ : ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಬಗ್ಗೆ.

ಶ್ರೀ ಎಂ.ಬಿ. ಪಾಟೀಲ್ (ಬಬಲೇಶ್ವರ) : ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 69 ಅಡಿಯಲ್ಲಿ ಕೃಷ್ಣಾ ನ್ಯಾಯ ಮಂಡಳಿಯ ದಿನಾಂಕ: 30.12.2010 ರಂದು ತೀರ್ಪನ್ನು ಏನು ನೀಡಿದೆ, ಇಲ್ಲಿಯವರೆಗೆ ಸರ್ಕಾರ ತೆಗೆದುಕೊಂಡಿರುವ ಸಕಾರಾತ್ಮಕ ಹೆಜ್ಜೆಗಳು ಏನಿವೆ, ಅದರ ಬಗ್ಗೆ ಮಾಹಿತಿ, ಮತ್ತು 2012–13ನೇ ಸಾಲಿಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ stage-3 ಮೂರನೇ ಹಂತದ ಘೋಷಣೆಗಳ ವಿಚಾರ ಕುರಿತು ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಕೊಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಮಾನ್ಯ ಅಧ್ಯಕ್ಷರೆ, ಇವತ್ತು ಕೃಷ್ಣಾ ಮತ್ತು ಕಾವೇರಿ ಎರಡೂ ನಮ್ಮ life line ಗಳು. ರಾಜ್ಯದ 14 ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ 60% of the basin 58.8% Krishna basin ದಲ್ಲಿ ಬರುತ್ತದೆ. ಇವತ್ತು ಕೃಷ್ಣಾ ತೀರ್ಪು ಬಚಾವತ್ ತೀರ್ಪು, ಮೊನ್ನೆ ಕೃಷ್ಣಾ ಟ್ರಿಬ್ಯುನಲ್ ಅವಾರ್ಡ್–1 1973 ರಲ್ಲಿ ಬಂದಿತು. 76 ರಲ್ಲಿ ಗೆಜೆಟ್ ನೋಟಿಫಿಕೇಷನ್ ಆಯಿತು. ನಮ್ಮ ರಾಜ್ಯಕ್ಕೆ ಆಗ 911 ಟಿಎಂಸಿ, ಮಹಾರಾಷ್ಟ್ರಕ್ಕೆ 666 ಟಿಎಂಸಿ ಹಾಗೂ ಆಂಧ್ರ ಪ್ರದೇಶಕ್ಕೆ 1001 ಟಿಎಂಸಿ ಎಂದು ಆಗಿತ್ತು. ಈಗ ಕೃಷ್ಣಾ ಟ್ರಿಬ್ಯುನಲ್ ಅವಾರ್ಡ್ ತೀರ್ಪು–2 ಬ್ರಿಜೇಶ್ ಕುಮಾರ್ ತೀರ್ಪು, ಏನು 30 ಡಿಸೆಂಬರ್ 2010 ರಂದು ಬಂದಿತು, ಅದರಲ್ಲಿ surplus water ನಲ್ಲಿ 65% dependent lift ನಲ್ಲಿ ನಮ್ಮ

ರಾಜ್ಯಕ್ಕೆ 177 ಟಿಎಂಸಿ ನೀಡಿದೆ. ಆ 177 ಟಿಎಂಸಿ ಯಲ್ಲಿ ನಮ್ಮ UKP Stage III ಕೃಷ್ಣಾ ಮೇಲ್ದಂಡೆ ಯೋಜನೆಗೆ 130 ಟಿಎಂಸಿ ಒದಗಿಸಿದೆ. ಇವತ್ತು ನಾವು ಈ ತೀರ್ಪು ಬಂದ ಮೇಲೆ ನಮ್ಮ ಅವಳಿ ಜಿಲ್ಲೆಗಳಾದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಶಾಸಕರು ಒಟ್ಟಾಗಿ ಸರ್ಕಾರದ ಮೇಲೆ ಒತ್ತಡ ಹೇರಿ, ಸರ್ಕಾರವೂ ಕೂಡ ಇವತ್ತಿನ ದಿವಸ ಎರಡು ದಿವಸಗಳ ಕಾಲ ಇದೇ ಅಧಿವೇಶನದಲ್ಲಿ ಚರ್ಚೆ ಆಯಿತು. 15.12.2011 ಮತ್ತು 16.12.2011. ಅದರ ಮೇಲೆ ನಾನು ಉಲ್ಲೇಖ ಮಾಡುವುದಕ್ಕೆ ಹೋದರೆ ಬಹಳ ಸಮಯ ಹಿಡಿಯುತ್ತದೆ. ಆಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಮಾತನಾಡಿದರು. ನಮ್ಮ ಎಲ್ಲಾ ಶಾಸಕರು ಮಾತನಾಡಿದ್ದಾರೆ. ನಾನೂ ಕೂಡ ಕೆಲವು ಪ್ರಸ್ತಾಪಗಳನ್ನು ಮಾಡಿದ್ದೇನೆ. ತದನಂತರ ಮಾರನೆ ದಿನ ಅವತ್ತಿನ ದಿವಸ ಬೃಹತ್ ನೀರಾವರಿ ಸಚಿವರಾದ ಬಸವರಾಜ ಬೊಮ್ಮಾಯಿಯವರು ಉತ್ತರವನ್ನು ನೀಡಿದರು. ಬಿಜಾಪುರ ಜಿಲ್ಲೆಗೆ 130 ಟಿಎಂಸಿಯಲ್ಲಿ ಅವಳಿ ಜಿಲ್ಲೆಗೆ 86 ಟಿಎಂಸಿ ನೀರು ಬರುತ್ತದೆ. ನಮಗೆ 80 ಟಿಎಂಸಿ ಬರುತ್ತದೆ. ಆಲಮಟ್ಟಿ ಡ್ಯಾಂ ಇರುವುದು ನಮ್ಮ ಬಿಜಾಪುರ ಜಿಲ್ಲೆಯಲ್ಲಿ. ಆದರೆ ನಾವು ಅವಕಾಶ ವಂಚಿತರು. ಇನ್ನೂ ಕೂಡ ನಮ್ಮಲ್ಲಿ ನೀರಾವರಿ ಆಗಿಲ್ಲ. ಬರಗಾಲ ಪ್ರದೇಶ ಎಂದು ಶಾಶ್ವತವಾದ ಹಣೆ ಪಟ್ಟಿಯನ್ನು ಕಟ್ಟಿಕೊಂಡಿದ್ದೇವೆ. ಆಗ ಮಾನ್ಯ ಬೃಹತ್ ನೀರಾವರಿ ಸಚಿವರು Floor Leaders ಮೀಟಿಂಗ್ ಕರೆದರು. Floor Leaders meeting ಕರೆದಾಗಲೂ ಈ ತೀರ್ಪು ಬಂದ ಮೇಲೆ ನಮ್ಮ ಮೂರು ರಾಜ್ಯಗಳು clarification ಕೇಳಿ ಅಪೀಲ್ ಮಾಡಿ ಟ್ರಿಬ್ಯುನಲ್ ಮುಂದೆ ಹೋಗಿವೆ. ಸುಪ್ರೀಂ ಕೋರ್ಟಿಗೆ ಹೋಗಿ ವಜಾ ಆಗಿದೆ ಮತ್ತೆ ಟ್ರಿಬ್ಯುನಲ್ ಮುಂದೆ ಕಳುಹಿಸಿದ್ದಾರೆ. ಇನ್ನೂ ಕೂಡ ಅದು ಗೆಜೆಟ್ ನೋಟಿಫಿಕೇಷನ್ ಆಗಿರಲಿಲ್ಲ. ಆದಾಗ್ಯೂ ಕೂಡ ಎಲ್ಲರ ಒತ್ತಾಯದ ಮೇರೆಗೆ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಬೃಹತ್ ನೀರಾವರಿ ಸಚಿವರು ಒಪ್ಪಿಕೊಂಡು in principle approval ಕೂಡ ಕೊಟ್ಟರು. ಬಜೆಟ್ discussion ನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ನಾವು ಜಲ ಸಂಪನ್ಮೂಲ ಅಭಿವೃದ್ಧಿಯಲ್ಲಿ ನೀರಾವರಿ ವಲಯಕ್ಕೆ 10.5 ಸಾವಿರ ಕೋಟಿ ರೂ. ಕೊಡುತ್ತೇವೆಂದು ಹೇಳಿದರು.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಮೂರನೇ ಹಂತಕ್ಕೆ 1,7000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಕೈಗೊಳ್ಳಲಾಗುವುದು

ಎಂದರು. ಮತ್ತು ನೀರಾವರಿ ಸಚಿವರು ಅನೇಕ ವಿಚಾರಗಳನ್ನು ತಮ್ಮ reply ನಲ್ಲಿ ಕೂಡ ಕೊಟ್ಟಿದ್ದಾರೆ. ಬಹಳ Scientific approach ತೆಗೆದು ಕೊಂಡಿದ್ದಾರೆ, integrated approach ಅನ್ನು ತೆಗೆದುಕೊಂಡಿದ್ದಾರೆ. ಏಕೆ ನಮ್ಮ ಯೋಜನೆಗಳು ತಡವಾಗಿವೆ? ಎಲ್ಲಿ ಸಮಸ್ಯೆಗಳು ಬರುತ್ತಿವೆ? ಎನ್ನುವುದರ ಬಗ್ಗೆ ಉತ್ತರವನ್ನು ಸಮರ್ಥವಾಗಿ ನೀಡಿದ್ದಾರೆ. ಆದರೆ ಇವತ್ತಿನ ದಿವಸ in reality ಏನಾಗುತ್ತಿದೆ ಎಂದರೆ, ಇವತ್ತು ನಾನು ಭಾವಿಸಿದ್ದೇನೆ, ಇನ್ನೂ ಕೂಡ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. Effective Steps ಅಂತ ನಾನು ಏತಕ್ಕೆ ಹೇಳಿದ್ದೇನೆಂದರೆ ಇವತ್ತು ಇನ್ನೂ ಅಲ್ಲಿ 524 ಮೀಟರ್ ಗೆ ಏರಿಸಬೇಕೆಂದರೆ, 76,000 ಎಕರೆಯನ್ನು ನಾವು ವಶಪಡಿಸಿಕೊಳ್ಳಬೇಕಾ ಗುತ್ತದೆ. ಆಗ ಮಾತ್ರ ಏರಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು 22 ಹಳ್ಳಿಗಳನ್ನು ಸ್ಥಳಾಂತರ ಮಾಡಿಸಬೇಕಾಗುತ್ತದೆ. ಆ ಒಂದು ಪ್ರಕ್ರಿಯೆ ಪ್ರಾರಂಭವಾಗ ಬೇಕಾಗಿದೆ. Land acquisition ಆಗಬೇಕಾಗಿದೆ. ಆ 22 ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ನೀರಾವರಿ ಸಚಿವರು ಹುಡ್ಕೋ ಮತ್ತು ಇನ್ನಿತರ ಏಜೆನ್ಸಿಗಳ ಮುಖಾಂತರ ಇವತ್ತು ಅನೇಕ ವಿಚಾರಗಳನ್ನು ತಮ್ಮ reply ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಬಹುಶಃ ಇವತ್ತು ಅವರು ಏನು effective steps ಅನ್ನು ಇಟ್ಟಿದ್ದಾರೆನ್ನುವ ಬಗ್ಗೆ ಸ್ಪಷ್ಟೀಕರಣ ನೀಡಬೆಕು. ಎರಡನೆಯದಾಗಿ ಮುಖ್ಯವಾಗಿ ಸನ್ಮಾನ್ಯ ಅಧ್ಯಕ್ಷರೆ, 17 ಸಾವಿರ ಕೋಟಿ ಅಂದರು ಕೂಡ ಇದನ್ನು ನಾವು DPR ನಲ್ಲಿ ಗಮನಿಸಿದಾಗ ಸರ್ಕಾರ ಅದೇ ರೀತಿ ಮಾಡಬೇಕಾಗುತ್ತದೆ. Cost is considered at Rs. 2.20 lakh per acre, ಇವತ್ತು escalations ಇವೆಲ್ಲವನ್ನೂ ನಾವು ವಿಚಾರ ಮಾಡುವಾಗ ಈ ಯೋಜನೆ 17 ಸಾವಿರ ಕೋಟಿ ಬದಲಿ ಬಹಳ ಇನ್ನೂ ಹೆಚ್ಚಿಗೆ ಆಗುತ್ತದೆ. ಇದು 7 ವರ್ಷದಲ್ಲಿ ಆಗಬೇಕಾದರೆ ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಪ್ರತಿವರ್ಷ ಕನಿಷ್ಠ ಪಕ್ಷ 5 ಸಾವಿರ ಕೋಟಿ ಇಡಬೇಕಾಗುತ್ತದೆ. ಕನಿಷ್ಠ ಪಕ್ಷ 5 ಸಾವಿರ ಕೋಟಿ ಇಟ್ಟಾಗ ಮಾತ್ರ 5 ವರ್ಷದಲ್ಲಾಗಲಿ 7 ವರ್ಷದಲ್ಲಾಗಲಿ ಆಗುತ್ತದೆ. ನಾನು, ಮುಖ್ಯ ಮಂತ್ರಿಗಳು ಮತ್ತು ಜಲ ಸಂಪನ್ಮೂಲ ಸಚಿವರು ಇಬ್ಬರು ಉತ್ತರ ಕರ್ನಾಟಕದವರೆ, ಬಿಜಾಪುರದ ಬಗ್ಗೆ ಸಂಪೂರ್ಣವಾದಂಥ ಅರಿವು ಇದೆ. ಅದಕ್ಕೆ ನಾವೇನು ಆಪೇಕ್ಷೆ ಮಾಡಿದ್ದೇವೆ. ನಮ್ಮ ಎಲ್ಲಾ ಶಾಸಕರ ಒತ್ತಾಯ

ಅದೇ ಇತ್ತು, ಜನರ ಒತ್ತಾಯ ಅದೇ ಇತ್ತು. 5 ಸಾವಿರ ಕೋಟಿ ರೂಪಾಯಿ ಕನಿಷ್ಠ ಪಕ್ಷ 2012–13ನೇ ಸಾಲಿನಲ್ಲಿ ಇಡಬೇಕಾಗಿತ್ತು. ಆದರೆ ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ DPR ಅನ್ನು ನೋಡುತ್ತಿದ್ದೆ. ಇವತ್ತಿನ ದಿವಸ DPR ನಲ್ಲಿ Financial and Physical Phasing of UKP Stage-3 –ಅಂಥ ಹೇಳುತ್ತಾರೆ. Financial Phasing ನಲ್ಲಿ should be executed in 7 years, the financial programme as under ಎಂದು ಹೇಳಿ. 2011–12 ಕ್ಕೆ 172 ಕೋಟಿ ಅದು 1% cumulative. 2012–13ನೇ ಸಾಲಿನಲ್ಲಿ 1205 ಕೋಟಿ, 7% cumulative starting Rs.77 crore.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) : ನೇರವಾಗಿ ವಿಷಯಕ್ಕೆ ಬಂದರೆ, ಸರ್ಕಾರ ಏನು ಮಾಡಿದೆ ಎಂದು ನಾನು ಹೇಳುತ್ತೇನೆ. ಅವರು ಏನು ಮಾಡಬೇಕೆಂದು ಹೇಳಿದರೆ ಆ ಯೋಜನೆಗೆ ನ್ಯಾಯವನ್ನು ಕೊಟ್ಟ ಹಾಗೆ ಆಗುತ್ತದೆ. ದಯವಿಟ್ಟು ನೇರವಾಗಿ ವಿಷಯಕ್ಕೆ ಬನ್ನಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಮಾತನಾಡುವುದು ಬೇಡವೆಂದರೆ ಬಿಟ್ಟು ಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಎಂ.ಬಿ. ಪಾಟೀಲ್, ನೇರವಾಗಿ point ಗೆ ಬನ್ನಿ. ಅವರು ಉತ್ತರ ಕೊಟ್ಟ ಮೇಲೆ clarification ಕೊಡಲಿ.

ಶ್ರೀ ಎಂ.ಬಿ. ಪಾಟೀಲ್ : I am discussing the DPR what is given to me. I have reserved my right in the Assembly. UKP Stage-3 ಯಲ್ಲಿ ಇವೊತ್ತು ಯಾವ ಯಾವ ಕೆಲಸ ಆಗಬೇಕಾಗಿದೆ? ಎಂದು ಮೊನ್ನೆ ಕೂಡ ನಾನು ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ಅವರು ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಮುಳವಾಡ ಏತ ನೀರಾವರಿ ಮೂರನೇ ಹಂತದ ವಿಸ್ತೃತವಾದ ಅಂದಾಜು ಪಟ್ಟಿ ಕೆಳಕಂಡ ಕಾಮಗಾರಿಗಳಿಗೆ ಒಳಪಟ್ಟಿದೆ ಎಂದು ಹೇಳಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತಕ್ಕೆ ಸರ್ಕಾರ ತಾತ್ಕಾಲಿಕ ತಾತ್ವಿಕ ಅನುಮೋದನೆ ಎಂದರೆ ಮುಳವಾಡ ಏತ ನೀರಾವರಿ ವೆಚ್ಚ 4 ಸಾವಿರದ 610 ಕೋಟಿ ಆಗುತ್ತದೆ. 2012–13ನೇ ಸಾಲಿಗೆ

342 ಕೋಟಿ ಅನುದಾನದ ಲಭ್ಯತೆ ಇರುತ್ತದೆ. ಇನ್ನೊಂದು ಕಡೆ ಹಂತ–3 ಉದ್ದೇಶಿತ ನೀರಾವರಿ ಕಲ್ಪಿಸುವ ನೀಟ್ಟಿನಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಸಿದ್ಧತೆಯನ್ನು ಮಾಡಿಕೊಳ್ಳಲು ಸಿದ್ಧತೆ ಮಾಡಿಕೊಂಡು ಟೆಂಡರ್‌ಗೆ preparation ಮಾಡಿಕೊಂಡಿದ್ದೀರಿ. ನಿಮ್ಮ ಉತ್ತರದಲ್ಲಿ ಅನುದಾನವನ್ನು ನೋಡಿದರೆ 342 ಕೋಟಿ. ತಾವು ಇದಕ್ಕೆ ಹಣ ಎಲ್ಲಿಂದ ಒದಗಿಸುತ್ತೀರಿ? ಈ Clarification ಅನ್ನು ನಾನು ಕೇಳುತ್ತಿದ್ದೇನೆ. ನಾವು 5 ಸಾವಿರ ಕೋಟಿ ಕೇಳಿದ್ದೇವೆ. ನಾವು ಒಮ್ಮತದಿಂದ ಒತ್ತಾಯ ಮಾಡುತ್ತಿದ್ದೇವೆ. ನಮಗೆ ಮತ್ತು ಬಿಜಾಪುರ ಜಿಲ್ಲೆಗೆ ಬಹಳ ವರ್ಷದಿಂದ ಈ ರೀತಿ ಆಗುತ್ತಿದೆ. Separate head of account ನಲ್ಲಿ ಕೊಡಿ, ಯಾವ ಯಾವ ಯೋಜನೆಗೆ ಎಷ್ಟೆಷ್ಟು ಕೊಡುತ್ತೀರಿ ಎಂಬುದನ್ನು ಕೊಡಿ. ಯಾವ ರೀತಿ ತಾವು ಖರ್ಚು ಮಾಡುತ್ತೀರಿ ಎಂಬುದನ್ನು ಕೊಡಿ. ಈಗ ನಾನು ತಮ್ಮ ಮುಖಾಂತರ, ಮುಖ್ಯಮಂತ್ರಿಗಳಿಗೆ ಮತ್ತು ಬೃಹತ್ ನೀರಾವರಿ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ನಾವು ಏನು 5 ಸಾವಿರ ಕೋಟಿ ಕೇಳಿದ್ದೇವೆ. ನೀವು 3 ಸಾವಿರ ಕೋಟಿ ಕೊಡುತ್ತೀರೋ, 3,500 ಕೋಟಿ ಕೊಡುತ್ತೀರೋ ಏಕೆಂದರೆ ನಮಗೊಂದು impression ಕೊಡಲಾಗಿತ್ತು. Plan size ನಲ್ಲಿ 7 ಸಾವಿರದ 597 ಕೋಟಿಯಲ್ಲಿ ನಮ್ಮ ಬೇರೆ ಕಡೆ ಎಲ್ಲೂ ಕೆಲಸ ಆಗಿಲ್ಲ. UKP Stage-3 ಯಲ್ಲಿ 60% major share ಹೋಗುತ್ತದೆ. Financial Phasing ಅನ್ನು ನೋಡಿದಾಗ 12 ನೂರ 5/ ಕೋಟಿ. . ಸಚಿವರ ಉತ್ತರದಲ್ಲಿ 2012–13ಕ್ಕೆ ನೀರಾವರಿಗೆ 342 ಕೋಟಿ ಮುಳವಾಡ ಯೋಜನೆಗೆ ಅನುದಾನ ಲಭ್ಯವಿದೆ ಎಂದು ಹೇಳಿದ್ದಾರೆ, ಈ ಕಡೆ ನಾವು ಟೆಂಡರ್ ಅನ್ನು Process ಮಾಡುತ್ತಿದ್ದೇವೆ. ಇವತ್ತಿನ ದಿವಸ ಗುತ್ತಿ ಬಸವಣ್ಣ, ಚಿಮ್ಮಲಗಿ ಎಲ್ಲಾ involve ಇದೆ. ಅದಕ್ಕೆ ನಮ್ಮ ಒತ್ತಾಯ ಇಷ್ಟೇ ಅಧ್ಯಕ್ಷರೆ, Separate Head of Account ನಲ್ಲಿ ಈ ಯೋಜನೆ 7 ವರ್ಷದಲ್ಲಿ ಮುಗಿಯಬೇಕಾದರೆ ಮೂರೂವರೆಯಿಂದ ನಾಲ್ಕು ಸಾವಿರ ಕೋಟಿ ಬೇಕು, ಇದನ್ನು Separate head of account ನಲ್ಲಿ ಇಡಬೇಕು. ಇನ್ನು 8 ತಿಂಗಳಿನಲ್ಲಿ bar chart ಯಾವ ರೀತಿ spend ಮಾಡುತ್ತೀರಿ? ಏಕೆಂದರೆ ಬರೀ ನಾವು ಇಟ್ಟಿದ್ದೇವೆ ಅನ್ನುವುದು ಬೇಡ. 5 ಸಾವಿರ ಕೋಟಿ ಸಾಕಾಗುವುದಿಲ್ಲ. ಈ Krishna Tribunal ಇರುವುದು ಸುಮಾರು 46 ವರ್ಷದ

ಯೋಜನೆ ಇದೇ ರೀತಿ ನಡೆದರೆ ಇನ್ನೂ 50 ವರ್ಷ ಬೇಕಾಗುತ್ತದೆ. 2013–14ಕ್ಕೆ ಮುಂದಿನ ವರ್ಷ ಯಾವ ಸರ್ಕಾರ ಬರುತ್ತದೆಯೋ ಗೊತ್ತಿಲ್ಲ. 2014–15 ಕ್ಕೆ 28% ಗೂ, 4, 418 crore, 2015–16 ಕ್ಕೆ 25%, Rs.4,300 Crore, then why 7% this year? ಮಾನ್ಯ ಬೊಮ್ಮಾಯಿಯವರೆ, ತಾವು ನಮ್ಮವರು ಇದ್ದೀರಿ. ತಮ್ಮ ಕೈಯಲ್ಲಿ ಆಗಬೇಕಾಗಿದೆ. ಜಗದೀಶ್ ಶೆಟ್ಟರ್ ರವರು ಉತ್ತರ ಕರ್ನಾಟಕದವರು ಇದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು, ನಿಮ್ಮ ಅವಧಿಯಲ್ಲಿ ಇವತ್ತಿನ ದಿವಸ ಕೆಲಸ ಆಗಬೇಕಾಗಿದೆ. ಮುಂದೆ ಹೇಳಿದ್ದೀರಿ. 25%, 28% ಈ ವರ್ಷ ಆಗಬೇಕಾಗಿದೆ. ಇಲ್ಲದಿದ್ದರೆ, ಅಪವಾದ ಬರುತ್ತದೆ. ಬೊಮ್ಮಾಯಿಯವರು ಇದ್ದುಕೊಂಡು, ಜಗದೀಶ್ ಶೆಟ್ಟರ್‌ರವರು ಇದ್ದುಕೊಂಡು ನಮಗೆ ಈ ರೀತಿ ಅನ್ಯಾಯವಾಗುತ್ತದೆಂದು ಬರುತ್ತದೆ.

ಅಧ್ಯಕ್ಷರು : ಎಂ.ಬಿ. ಪಾಟೀಲ್ ತಾವು ಪ್ರಸ್ತಾಪ ಮಾಡಿದ್ದೀರಿ. ಈಗ ಉತ್ತರ ಬರಲಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಬಜೆಟ್ ತದನಂತರ ನಮ್ಮ ವಿರೋಧ ಪಕ್ಷದ ನಾಯಕರು ಕೂಡ ಹೇಳಿದ್ದರು. ರಾಜ್ಯದ ನೀರಾವರಿ ಯೋಜನೆಗಳಿಗೆ 50 ಸಾವಿರ ಕೋಟಿ ಬೇಕಾಗಬಹುದೆಂದು ಒಂದು ಅಂದಾಜು.

ಯಡಿಯೂರಪ್ಪ ಸಾಹೇಬರೆ, ಇವತ್ತು ನಾವು 1 ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡನೆ ಮಾಡುತ್ತೇವೆ. ಹಿಂದಿನ ಸರ್ಕಾರಗಳು 28%, 25%, 32% ವರೆಗೆ budgetary allocation ಇರುತ್ತಿತ್ತು, ಈಗ Budgetary allocation 13% ಗೆ ಬಂದಿದೆ.

ಶ್ರೀ ಸಿದ್ದು ಸವದಿ : ಕೊನೆಯ ದಿವಸ ನೀವು ಇಷ್ಟೊಂದು ಸಮಯ ಕೊಟ್ಟರೆ ಹೇಗೆ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ನೀವು ನಮ್ಮ whip ಇದ್ದೀರಾ? ತಾವು ಹೇಳಿ ಉಪಾಧ್ಯಕ್ಷರೇ, ನಮಗೆ ಸಂಬಂಧವಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಅವಕಾಶ ಕೊಡುತ್ತೇನೆ, ತಾವು ದಯವಿಟ್ಟು conclude ಮಾಡಿ.

ಶ್ರೀ ಎಂ.ಬಿ. ಪಾಟೀಲ್ : ಅಂದರೆ ಸವದಿಯವರೆ, ನೀವು ನಮ್ಮ ಬಿಜಾಪುರ ಜಿಲ್ಲೆಯವರಲ್ಲವೇ, ನೀವು ಅವಿಭಾಜ್ಯ ಜಿಲ್ಲೆಯವರಿದ್ದೀರಿ,

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಉಪಾಧ್ಯಕ್ಷರೇ, ಪಾಟೀಲ್‌ರೆ, ನಮ್ಮ ಸರ್ಕಾರದ ಸಾಧನೆಗಿಂತ, ಹಿಂದಿನ ಸರ್ಕಾರಗಳು ನೀರಾವರಿ ಬಗ್ಗೆ ಗಮನ ಕೊಟ್ಟಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ನನ್ನದು 2 clarifications ಇದೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ : ಕೊಪ್ಪಳ ಜಿಲ್ಲೆಯ ಸಮಸ್ಯೆಯೂ ಇದೆ, ಹೀಗಾದರೆ.....

(ಗೊಂದಲ)

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ತಾವು ಮೊನ್ನೆ ಮಾತನಾಡಿದ್ದೀರಲ್ಲ?

ಶ್ರೀ ಎಂ.ಬಿ. ಪಾಟೀಲ್ : ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ, ನಾನು ಕಡೆಯ 2 clarification ಕೇಳುತ್ತೇನೆ. ಇದು ಹಣ ಸಾಕಾಗುತ್ತಿಲ್ಲ. 12,500 ಕೋಟಿ ರೂಪಾಯಿಯಿಂದ ಏನೂ ಆಗುವುದಿಲ್ಲ. ಹೀಗಾದರೆ ಇನ್ನೂ 40–50 ವರ್ಷ ಬೇಕಾಗುತ್ತದೆ. ನೀವು ಹೆಚ್ಚಿನ ಹಣವನ್ನು ಕೊಡುವುದಕ್ಕೆ ಬಯಸುತ್ತಿದ್ದೀರಾ? ಮೂರೂವರೆ ಸಾವಿರದಿಂದ 4000, 5000 ಕೋಟಿ ಹಣ ಬೇಕಾಗುತ್ತದೆ, ಈ ವರ್ಷ 1230 ಯಲ್ಲಿ ಕೊಡುತ್ತೀರೋ ಹೇಗೆ? ಇದನ್ನು Separate head ನಲ್ಲಿ ಕೊಟ್ಟು ಯೋಜನಾವಾರು ಕೊಡುತ್ತೀರೋ ಹೇಗೆ? ಮತ್ತು ಯಾವ ಯಾವ ಯೋಜನೆಗೆ ಮುಳವಾಡ ಏತ ನೀರಾವರಿ, ಚಿಮ್ಮಲಗಿ, ಗುತ್ತಿ ಬಸವಣ್ಣ ಯೋಜನೆಗೆ ಎಷ್ಟೆಷ್ಟು ದುಡ್ಡು ಕೊಡುತ್ತೀರಿ? ತಾವು ಟೆಂಡರ್ ಕರೆದಿದ್ದೀರಿ, ಅದಕ್ಕೆ ಅನುದಾನ ಲಭ್ಯವಿಲ್ಲ. Effective steps ಕಡತಗಳ ಬಗ್ಗೆ hand-in-hand ಎಲ್ಲವೂ ಆಗಬೇಕು ಎನ್ನುವುದನ್ನು ತಾವು ಹೇಳಿದ್ದೀರಿ, ಬಹಳ ಒಳ್ಳೆಯ ವಿಚಾರಗಳನ್ನು ತಾವು ವ್ಯಕ್ತಪಡಿಸಿದ್ದೀರಿ. ನಾವು ಬಹಳಷ್ಟು ಆಶಾ ಭಾವನೆಯನ್ನು ತಮ್ಮಲ್ಲಿ ಇಟ್ಟುಕೊಂಡಿದ್ದೇವೆ. ಬಹಳ ಸುದೀರ್ಘವಾದಂಥ ಭಾಷಣದಲ್ಲಿ ಎಲ್ಲಾ ಅನೇಕ ಹೊಸದಾಗಿರುವಂಥ ಹಕ್ಕನ್ನು involve ಮಾಡಿಕೊಳ್ಳುವುದು, ಎಲ್ಲವನ್ನು ತಾವು ಕೊಟ್ಟಿದ್ದೀರಿ,

ದಾಖಲೆಯನ್ನು ತಮಗೆ ತೋರಿಸುತ್ತೇನೆ. ಆದರೆ ಇವೆಲ್ಲವೂ ಕೂಡಾ ಪ್ರಾರಂಭ ಆಗಬೇಕು. ಯಾವುದೂ ಪ್ರಾರಂಭವಾಗಿಲ್ಲ, ಇಂಜಿನಿಯರ್‌ಗಳ transfer ಆಗಿಲ್ಲ. ಇಂಜಿನಿಯರ್‌ಗಳು ಮತ್ತು infrastructures ಬೇಕಾಗುತ್ತದೆ, ಡಿವಿಷನ್ ಆಗಬೇಕು ಇನ್ನೂ ಬಹಳ ಕೆಲಸವಿದೆ. ಇವೆಲ್ಲದಕ್ಕೂ ಕೂಡಾ ಸನ್ಮಾನ್ಯ ಬೃಹತ್ ನೀರಾವರಿ ಸಚಿವರು ಉತ್ತರವನ್ನು specific ಆಗಿ ಒದಗಿಸಬೇಕು. ನಾವು ಬಹಳ ಆಶಾ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಬಹುಶಃ ನಾನು ಅಪೇಕ್ಷೆಪಟ್ಟಿದ್ದೆ, ಇನ್ನೂ 10–15 ನಿಮಿಷ ಮಾತನಾಡುವುದಕ್ಕೆ ಇದೆ, ಅವಕಾಶ ಕೊಡುತ್ತಾರೆ ಎಂದು,

(ಗೊಂದಲ)

ಅಧ್ಯಕ್ಷರು : Clarifications ಕೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಮಾತನಾಡುವುದಕ್ಕೆ ಕೊಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನಾನು ಉತ್ತರ ಕೊಡುತ್ತೇನೆ, ಆಮೇಲೆ Clarifications ಕೇಳಲಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ ಎ.ಎಸ್. ಪಾಟೀಲ್‌ರೆ, ನೋಟೀಸ್ ಕೊಟ್ಟಿದ್ದು ಇವರೊಬ್ಬರೇ, ಇವರು ಯಾರೂ ಕೊಟ್ಟಿಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಎಲ್ಲರೂ ಸೇರಿ ಸಹಿ ಮಾಡಿ ಕೊಟ್ಟಿದ್ದೇವೆ, ಆದರೆ ಅದು mis-place ಆಗಿರಬಹುದು.

(ಗೊಂದಲ)

ಅಧ್ಯಕ್ಷರು : ಎ.ಎಸ್. ಪಾಟೀಲ್‌ರೇ, ಕುಳಿತುಕೊಳ್ಳಿ, ಆಮೇಲೆ Clarifications ಕೇಳಿ. ಇವರೊಬ್ಬರೇ ಕೊಟ್ಟಿದ್ದು, ನೀವು ನೋಟಿಸ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಸನ್ಮಾನ್ಯ ಸಭಾಧ್ಯಕ್ಷರೇ, ...

ಅಧ್ಯಕ್ಷರು : ಉತ್ತರ ಹೇಳಲಿ, Please ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ : ನಾನು ಉತ್ತರ ಕೊಡುತ್ತೇನೆ, ಕ್ಲಾರಿಫಿಕೇಷನ್‌ನಲ್ಲಿ ನೀವು ಆಮೇಲೆ ಮಾತನಾಡಿ. ಎಂ.ಬಿ. ಪಾಟೀಲರು

ಬಹಳಷ್ಟು ಸುದೀರ್ಘವಾಗಿ UKP Stage-3 ಬಗ್ಗೆ ನಮ್ಮ ಕೃಷ್ಣಾ ಅವಾರ್ಡ್ ಆದ ಮೇಲೆ, ಆಗಿರುವ ಬೆಳವಣಿಗೆಯಿಂದ ಹಿಡಿದು..

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೇ ಅವಕಾಶ ಕೊಡಿ.

ಅಧ್ಯಕ್ಷರು : ನೀವು ಸಹಿ ಮಾಡಿಲ್ಲ, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅವಕಾಶ ಕೊಡಲೇಬೇಕು, ಇಲ್ಲದಿದ್ದರೆ ನಾನು ಬಾವಿಗೆ ಬರಬೇಕಾಗುತ್ತದೆ.

ಅಧ್ಯಕ್ಷರು : ಅವಕಾಶವಿಲ್ಲ, ಕುಳಿತುಕೊಳ್ಳದಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಬನ್ನಿ. ಅಲ್ಲೆಲ್ಲಾ ನಿಂತು ಮಾತನಾಡಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಶ್ರೀ ಎಂ.ಬಿ. ಪಾಟೀಲ್‌ರು ಸುದೀರ್ಘವಾಗಿ ಯುಕೆಪಿ ಸ್ಟೇಜ್ 3 ಬಗ್ಗೆ ಮಾತನಾಡಿದ್ದಾರೆ. ಅವರ ಮುಖ್ಯವಾಗಿರುವಂಥ ಉದ್ದೇಶ ಈ ಕಾಮಗಾರಿಗಳು ತೀವ್ರಗತಿಯಲ್ಲಿ ಆಗಬೇಕು ಎನ್ನುವುದು, ಒದಗಿಸಿರುವ ಹಣಕಾಸು.....

ಅಧ್ಯಕ್ಷರು : ಅಲ್ಲೆಲ್ಲಾ ನಿಂತು ಕೊಂಡು ಮಾತನಾಡಿದರೆ ಹೊರಗಡೆ ಹೋಗಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) ರವರು ಸದನದ ಬಾವಿಯೊಳಗೆ ಬಂದು ನಿಂತು, ನೀವು ಯಾವುದೇ ಶಿಕ್ಷೆ ಕೊಟ್ಟರೂ ನಾನು ರೆಡಿ ಇದ್ದೇನೆ ಎಂದು ಹೇಳಿದರು.)

ಶ್ರೀ ಸಿದ್ದರಾಮಯ್ಯ : ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಸಾರ್ ಅವರು ಸಹಿ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಕೋಪಿಸಿಕೊಳ್ಳಬೇಡಿ,

ಶ್ರೀ ಬಸವರಾಜ ಬೊಮ್ಮಾಯಿ : ನಾನು 5 ನಿಮಿಷ ಉತ್ತರ ಕೊಡುತ್ತೇನೆ. ನಂತರ ಅವರು ಮಾತನಾಡಲಿ. ನೀವು ಏನು ಹೇಳುತ್ತೀರೋ ಅದಕ್ಕೆ clarify ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಬಸವರಾಜುರವರೇ, ಅವರು ಏನು ಸಲಹೆ ಕೊಡುತ್ತಾರೆ ತೆಗೆದುಕೊಳ್ಳಿ, ಹೋಗಿ ನಿಮ್ಮ ಜಾಗದಲ್ಲಿ ನಿಂತುಕೊಂಡು ಮಾತನಾಡಿ.

ಅಧ್ಯಕ್ಷರು : ಬೆಳಗ್ಗೆ ಹೊತ್ತು, ಕರೆಯುವಾಗ ಇರುವುದಿಲ್ಲ,

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ದೊಡ್ಡ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ನೀರಾವರಿ ಸಚಿವರಿಗೆ ಈಗಾಗಲೇ ನಾನು ಹೇಳಿದ್ದೇನೆ, I am also an Engineer ಎಂದು. ಅಲ್ಲಿ ಏನಾಗುತ್ತಿದೆ ಎನ್ನುವ ಬಗ್ಗೆ ಮಾತ್ರ ನಾನು ಕೆಲವು specific ಆಗಿ ತಮಗೆ ಕೇಳುತ್ತೇನೆ.

1) ಬಿಜಾಪುರ ಜಿಲ್ಲೆ ಅಷ್ಟೇ ಅಲ್ಲ, ಕೃಷ್ಣಾ 3ನೇ ಹಂತದ ಯೋಜನೆಗಳನ್ನು Global tender ಮುಖಾಂತರ ಏಕೆ ಮಾಡುವುದಕ್ಕೆ ಸಾಧ್ಯವಿಲ್ಲ? ಎಂದು ನಾನು ಸರ್ಕಾರಕ್ಕೆ ಮೊದಲ ಪ್ರಶ್ನೆ ಕೇಳುತ್ತೇನೆ. ಇದು ಬರೀ ಕೃಷ್ಣಾ 3ನೇ ಹಂತದ ಯೋಜನೆಗಳಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳನ್ನು ಮುಂದಿನ 5 ವರ್ಷಗಳಲ್ಲಿ Global tender ಮುಖಾಂತರವಾಗಿ ಸಂಪೂರ್ಣ ಮಾಡಿ ರಾಜ್ಯದ ರೈತರಿಗೆ ನ್ಯಾಯ ಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವ ನಿರ್ಧಾರ ಸರ್ಕರ ಏಕೆ ತೆಗೆದುಕೊಳ್ಳುವುದಿಲ್ಲ ಎಂದು ಪ್ರಶ್ನೆಯನ್ನು ಕೇಳುತ್ತೇನೆ. ನಾನು ಏಕೆ ಈ ಪ್ರಶ್ನೆಯನ್ನು ಮುಂದಿಡುತ್ತಿದ್ದೇನೆಂದರೆ; ನಾವು ಕರ್ನಾಟಕ ರಾಜ್ಯದ ಇತಿಹಾಸವನ್ನು ತೆಗೆದುಕೊಂಡರೆ ನೀರಾವರಿ ಯೋಜನೆಗಳಿಗೆ ಹಿಂದೆ ನಾವೆಲ್ಲಾ ಯಾವ ರೀತಿಯಾದಂಥ ಒಂದು ಹೆಚ್ಚಿನ ಪ್ರಾಧ್ಯಾನತೆಯನ್ನು ಕೊಡಬೇಕಾಗಿತ್ತೋ, ಒಂದು ವೇಳೆ ಕೊಟ್ಟಿದ್ದರೆ, ಬಹುಶಃ ಇವತ್ತು ಈ ಒಂದು ಭೀಕರ ಬರಗಾಲ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ನಾವು ಭಿಕ್ಷೆ ಬೇಡಬೇಕಾದಂಥ ಪರಿಸ್ಥಿತಿ ಬರುತ್ತಿರಲಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಹಾರಾಷ್ಟ್ರ ಸರ್ಕಾರ, ಎಲ್ಲಾ ನೀರಾವರಿ ಯೋಜನೆಗಳನ್ನು ಮುಗಿಸಿದ್ದಾರೆ, ಆಂಧ್ರ ಸರ್ಕಾರ ಎಲ್ಲಾ ನೀರಾವರಿ ಯೋಜನೆಗಳನ್ನು ಮುಗಿಸಿಕೊಂಡಿದ್ದಾರೆ, ಕರ್ನಾಟಕದಲ್ಲಿ ಏಕೆ ಸಾಧ್ಯವಾಗಿಲ್ಲ ಎನ್ನುವುದು, ಅದಕ್ಕೆ ನನ್ನ ಮೊದಲ demand, ಇವತ್ತು ಜುಲೈ 16ನೇ ತಾರೀಖಿನಿಂದ ಜುಲೈ

23ನೇ ತಾರೀಖಿನಲ್ಲಿ ಇಡೀ ಜಿಲ್ಲೆಯಾದ್ಯಂತ ಒಂದೂವರೆ ಲಕ್ಷ ಜನ ಎತ್ತಿನ ಬಂಡಿ ಕಟ್ಟಿಕೊಂಡು ಹೋರಾಟ ಮಾಡಿದ್ದು ಇದೇ ಉದ್ದೇಶದಿಂದಲೇ, ನಮ್ಮ ನೀರಾವರಿ ಯೋಜನೆಗಳು ಮುಳುವಾಡಿ, ಚಿಮ್ಮಲಗಿ, ಬೂದ್ಯಾಳ ಇರಬಹುದು, ಬಬಲೇಶ್ವರ ಏತ ನೀರಾವರಿ ಯೋಜನೆ ಇರಬಹುದು, ತಾವು Global tender ಮುಖಾಂತರ ಏಕೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಂಥದ್ದು, ಒಂದು R & R ಮಾಡುವುದಕ್ಕೆ ಭೂಮಿ acquire ಮಾಡುವುದಕ್ಕೆ ಒಂದು ಟೆಂಡರ್ ಕರೆಯಿರಿ, ಚಿಮ್ಮಲಗಿ ಏತ ನೀರಾವರಿಗೆ ಒಂದು ಮುಳುವಾಡಕ್ಕೆ, ಹಿಪ್ಪರಗಿಗೆ ಒಂದು ಟೆಂಡರ್ ಕರೆಯಿರಿ, 5 ವರ್ಷಗಳಲ್ಲಿ ಯೋಜನೆಗಳನ್ನು ಮುಗಿಸಿ, ಅದಕ್ಕೆ budgetary support ಕೊಡಿ, ಸಾಕಷ್ಟು ಜನ ಹಣ ಇರುವಂಥ contractors ಇದ್ದಾರೆ. ಬಂದು ಕೆಲಸ ಮಾಡಿ ಕೊಟ್ಟು ಹೋಗುತ್ತಾರೆ. 15 ವರ್ಷ, 10 ವರ್ಷ budgetary support ಕೊಡಿ ಸಾಕು, ಇವತ್ತು ನಾವು ದೊಡ್ಡ ದೊಡ್ಡ ಯೋಜನೆಗಳನ್ನು ತರುತ್ತೇವೆ. ಈ ಚತುಷ್ಕೋನ ರಸ್ತೆ ಮಾಡಿದ್ದಾರೆ, ವಾಜಪೇಯಿಯವರು ಇದ್ದಂಥ ಒಂದು ಕಾಲದಲ್ಲಿ ಕನಸು ಕಂಡು, ಇಡೀ ದೇಶದಲ್ಲಿ ತಂದಂಥ ಯೋಜನೆಯನ್ನು ನಾವು Global tender ಮುಖಾಂತರ ಮಾಡುತ್ತಿಲ್ಲವೇ? ನೈಸ್ ರಸ್ತೆ, ಬೆಂಗಳೂರು ಮೆಟ್ರೋ ಯೋಜನೆಗಳನ್ನು Global tender ಮುಖಾಂತರ ಮಾಡುತ್ತಿಲ್ಲವೇ? ರಾಜ್ಯದ ರೈತರಿಗೆ ಏಕೆ ನಾವು ಅನ್ಯಾಯ ಮಾಡುತ್ತಿದ್ದೇವೆ? ರೈತರ ಯೋಜನೆಗಳಿಗೆ ಏಕೆ Global tender ಮುಖಾಂತರ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಾವು ಕೇಳುತ್ತಿರುವುದು, ನೀವು ಬರೀ 10 ಕಿ.ಮೀ. 5 ಕಿ.ಮೀ. ರಸ್ತೆಗೆ ಟೆಂಡರ್ ಕರೆಯುವುದು, ಟೆಂಡರ್ ಕರೆದಿದ್ದೇವೆ ಎಂದು ಗುದ್ದಲಿ ಪೂಜೆ ಮಾಡುವುದು, 1 ಲಕ್ಷ ಜನರನ್ನು ಕರೆದು ನಾವು ಜೈಕಾರ ಹಾಕಿಸಿಕೊಳ್ಳುವುದು. ಇದು ಮುಗಿಯುವುದಕ್ಕೆ 20 ವರ್ಷ ಬೇಕು, ಅದೇ ಹೆಸರನ್ನು ಹೇಳಿ ಕೊಳ್ಳುತ್ತಾ ಹೋಗುವುದು. ಇವತ್ತು 43 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಚಿಮ್ಮಲಗಿ ಯೋಜನೆಗೆ 2006ರಲ್ಲಿ ಟೆಂಡರ್ ಕರೆದದ್ದು, ಇವತ್ತಿಗೆ ಮುಗಿದಿದೆಯೇ 43 ಕೋಟಿ ರೂಪಾಯಿ ಕೆಲಸ? ಇವತ್ತಿಗೂ ಮುಗಿದಿಲ್ಲ. 2006 ರಲ್ಲಿ ಟೆಂಡರ್ ಕರೆದಿದ್ದು, ಆದರೆ ಆ ಟೆಂಡರ್ approval ಆಗಿದ್ದು 2009ರಲ್ಲಿ, ಇವತ್ತು ನಾವು 2013ನೇ ಇಸವಿಗೆ ಬರುತ್ತಿದ್ದೇವೆ ಆದರೂ

ಇವತ್ತಿಗೂ ರೂ.43 ಕೋಟಿಗಳ ಚಿಮ್ಮಲಿಗೆ ಹೆಡ್‌ವರ್ಕ್ ಕೆಲಸ ಮುಗಿದಿಲ್ಲ. ಅದಕ್ಕೆ ರೈತರಿಗೆ ಅನ್ಯಾಯ ಮಾಡುವುದನ್ನು ನಾವು ನಿಲ್ಲಿಸಬೇಕು. ಈ ಮನೆಯಲ್ಲಿರುವಂಥ 224 ಜನ ಶಾಸಕರು ನಮ್ಮ ಆತ್ಮಸಾಕ್ಷಿಯಾಗಿ ನೋಡಿ ಕೊಳ್ಳಬೇಕಾಗಿದೆ, ಇಡೀ ರಾಜ್ಯದಲ್ಲಿರುವ ನೀರಾವರಿ ಯೋಜನೆಗಳನ್ನು Global tender ಮುಖಾಂತರ ಅದು 50 ಸಾವಿರ ಕೋಟಿ ಇರಲಿ, 1 ಲಕ್ಷ ಕೋಟಿ ಇರಲಿ, 10 ವರ್ಷದಲ್ಲಿ ನೀರಾವರಿ ದಶಕ ಎಂದು ನೀವೇನು ಮಾಡಿದ್ದೀರಿ, ನಿಮಗೆ ಇಚ್ಛಾ ಶಕ್ತಿ ಇದ್ದರೆ, ರೈತರ ಬಗ್ಗೆ ಕಳಕಳಿ ಇದ್ದರೆ ಈ ಸರ್ಕಾರಕ್ಕೆ ಯಾವ ರೈತರ ಮೇಲೆ ಪ್ರಮಾಣ ಮಾಡಿ ನೀವು ಅಧಿಕಾರಕ್ಕೆ ಬಂದಿದ್ದೀರಿ, ನಿಮಗೆ ನಿಜವಾಗಿಯೂ ಇಚ್ಛಾ ಶಕ್ತಿಯಿದ್ದರೆ ನೀವು Global tender ಮುಖಾಂತರ ಯೋಜನೆಗಳನ್ನು ಮುಂದಿನ 5 ವರ್ಷಗಳಲ್ಲಿ ಮುಗಿಸಬೇಕು. ಉದಾಹರಣೆಗೆ ಆಂಧ್ರ ಪ್ರದೇಶದ Y.S. ರಾಜಶೇಖರ್ ರೆಡ್ಡಿ ರವರು 50 ಸಾವಿರ ಕೋಟಿ ರೂ.ಗಳ ಯೋಜನೆಗಳನ್ನು 5 ವರ್ಷದಲ್ಲಿ Global tender ಮುಖಾಂತರ complete ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಮಾಡಿದ್ದರೆ. ಆದರೆ ಇವತ್ತಿಗೂ ನಮ್ಮ ಮುದ್ದೇಬಿಹಾಳದಲ್ಲಿ ಮಾಳಿಗೆ ಮೇಲೆ ನಿಂತುಕೊಂಡು ಕಲ್ಲು ಎಸೆದರೆ ನಮ್ಮ ಹೊಳೆಯಲ್ಲಿ ಕಲ್ಲು ಬೀಳುತ್ತದೆ, ಆದರೆ ನಮಗೆ ಕುಡಿಯುವುದಕ್ಕೆ ನೀರಿಲ್ಲ. ಆ ನೋವನ್ನು ಹೇಳಿಕೊಳ್ಳುವುದಕ್ಕೆ ಕೂಡಾ ಇಲ್ಲಿ ನಮಗೆ ಅವಕಾಶ ಕೊಡುತ್ತಿಲ್ಲವೆಂದಾಗ ನನಗೆ ಬಹಳ ನೋವಾಗಿತ್ತು. ದಯಮಾಡಿ ಈ ಸರ್ಕಾರಕ್ಕೆ ಬದ್ಧತೆ ಇದ್ದರೆ, ಈ ಸರ್ಕಾರಕ್ಕೆ ರೈತರ ಮೇಲೆ ನಿಜವಾದ ಪ್ರಾಮಾಣಿಕತೆ ಇದ್ದರೆ Global tender ಮುಖಾಂತರ ಮುಂದಿನ 5 ವರ್ಷಗಳಲ್ಲಿ ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸಬೇಕು. ಇಲ್ಲದೇ ಹೋದರೆ ಮತ್ತೆ ಮುಂದಿನ 2 ತಿಂಗಳಲ್ಲಿ ಇಡೀ ರೈತರ ಯಾತ್ರೆ ಜಿಲ್ಲೆಯಲ್ಲಿ ನಡೆಯುತ್ತದೆ. ಈ ಸರ್ಕಾರದ ವಿರುದ್ಧವಾಗಿ ರೈತರು ಬಂಡೇಳುತ್ತಾರೆ ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟು ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ನೀರಾವರಿ ಎಂದರೆ ಖಂಡಿತವಾಗಿಯೂ ಬಹಳ ಭಾವನಾತ್ಮಕವಾಗಿ ನಮ್ಮ ಎಲ್ಲಾ ಸದಸ್ಯರು ಮಾತನಾಡುವುದು ಬಹಳ ಸಹಜ. ಈ ರಾಜ್ಯದಲ್ಲಿ ನೀರಾವರಿಯ ಕುರಿತು ಏನು ಇತಿಹಾಸ ನಡೆದಿದೆ ಎಂಬುದನ್ನು ಎ.ಎಸ್. ಪಾಟೀಲ್‌ರವರು ಹೇಳಿದ್ದಾರೆ. ಅದನ್ನು ಪುನರುಚ್ಚಾರ

ಮಾಡಲು ಹೋಗುವುದಿಲ್ಲ. ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಹಿಂದಿನ ಸರ್ಕಾರಗಳು ಕೊಟ್ಟಿದ್ದರೆ ಎನ್ನುವ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ನೇರವಾಗಿ ನನ್ನದೇ 4-5 subjects ಇದೆ. ಅದಕ್ಕಾಗಿ ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅವರ ಸಲಹೆ ಏನಿದೆ, ಏನು ಕ್ರಮ ಕೈಗೊಳ್ಳುತ್ತೇವೆ ಎಂಬುದನ್ನು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ಇವತ್ತು Krishna Tribunal ಬಂದ ಮೇಲೆ ಅದಕ್ಕೆ clarification ಹಾಕುವ ಸಂದರ್ಭದಲ್ಲಿ ಎಲ್ಲಾ ಪಕ್ಷದ ನಾಯಕರುಗಳ ಸಹಕಾರದಿಂದ ರಾಜ್ಯದ ಹಿತದೃಷ್ಟಿಯಿಂದ clarification ಹಾಕಿ ತದನಂತರ ನಾವು ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ನಾವು ಸಂಪೂರ್ಣವಾಗಿ ತೆಗೆದುಕೊಂಡಾಗ UKP Stage-3 ಕ್ಕೆ ಒಂದು DPR ಅನ್ನು ಮಾಡಿ ಸುಮಾರು 17,707 ಕೋಟಿ ರೂ.ಗಳನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನ ಮಾಡಿದ್ದೇವೆ. ಅದಕ್ಕೆ ಒಂದು ಆಡಳಿತಾತ್ಮಕ ಅನುಮೋದನೆಯನ್ನು ನಾವು ಕೊಟ್ಟಿದ್ದೇವೆ. ನಾನು ಸೂಕ್ಷ್ಮವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನೀರಾವರಿ ಎಂದರೆ ಬಹಳಷ್ಟು ಸುದೀರ್ಘ ಒಂದು ವಿಚಾರ. ಇವತ್ತು ಹಿಂದಿನ KWT-1 ಬಂದ ಮೇಲೆ administrative sanction ಕೊಡುವುದಕ್ಕೆ 10–12 ವರ್ಷ ಗಳಾಯಿತು. ನಂತರ ಕಾಮಗಾರಿಗಳು ಪ್ರಾರಂಭವಾದವು. ಈ ಎಲ್ಲಾ ಹಿನ್ನೆಲೆಯಲ್ಲಿ ಇವತ್ತು ನಾವು ಕೆಲಸವನ್ನು ಮಾಡಬೇಕಾಗಿದೆ. ಇಂದು 519ರ ಮೇಲೆ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿದೆ. ಇವತ್ತಿಗೂ ಕೂಡಾ tribunal notification ಆಗಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ. ಈ Notification ಆಗುವವರೆಗೆ ಮಾಡಬಾರದೆಂಬ ಕಾರಣದಿಂದಲೇ ಇವತ್ತು notification ಇಲ್ಲದಿದ್ದರೂ ಕೂಡಾ ನಮ್ಮ ಸರ್ಕಾರ ರಾಜಕೀಯ ಇಚ್ಛಾಶಕ್ತಿ ಯನ್ನು ಪ್ರಕಟಣೆ ಮಾಡಿ ಇವತ್ತು ಈ ಕಾಮಗಾರಿಗಳನ್ನು ತೆಗೆದು ಕೊಂಡಿದ್ದೇವೆ. ಇವತ್ತು ನಾವು UKP stage-3 ನಲ್ಲಿ ಎಷ್ಟು ದುಡ್ಡು ಇಟ್ಟಿದ್ದೀರಿ, ಕಡಿಮೆ ಇಟ್ಟಿದ್ದೀರಿ, ಜಾಸ್ತಿ ಇಡಬೇಕೆನ್ನುವುದು ಅವರ ನಿಖರವಾದ ಒಂದು ಪ್ರಶ್ನೆ. ನಾವು UKP stage-3 ಗೆ ಕಳೆದ ವರ್ಷ ನಮ್ಮ opening balance 512 ಕೋಟಿ ರೂ. bond ಮುಖಾಂತರ ಒಂದು ಇದೆ. ಈ ವರ್ಷ 1156 ಕೋಟಿ ರೂ. UKP stage-3 ಗೆ ಇಟ್ಟಿದ್ದೇವೆ. ಒಟ್ಟು 1668 ಕೋಟಿ ರೂ. ನಮಗೆ ಲಭ್ಯವಿದೆ. ನಮ್ಮ ಡಿ.ಪಿ.ಆರ್. ಪ್ರಕಾರ ನಾವು 1205

ಕೋಟಿ ರೂ. ಇಡಬೇಕಿತ್ತು. ಈಗ 1168ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಇಲ್ಲಿ ನಾನು ಮುಂದೆ 42 ಹೇಳಿದ್ದು, 3 ಲಿಫ್ಟ್ ಮತ್ತು ಇತರೆ ಕಾಮಗಾರಿಗಳಿಗೆ ಏನು ಟೆಂಡರ್ ಕರೆದಿದ್ದೇವೆ, ಅದರ 1/3 amount ಅನ್ನು ನಾವು ಇಲ್ಲಿ ತೋರಿಸಿದ್ದೇವೆ. ಆದುದರಿಂದ ಈ ಯೋಜನೆಗೆ ಡಿ.ಪಿ.ಆರ್. ಪ್ರಕಾರ ಎಷ್ಟು ದುಡ್ಡನ್ನು ಇಡಬೇಕಾಗಿತ್ತು ಅದನ್ನು ಇಡುತ್ತೇವೆ. ತಾವು 5 ಸಾವಿರ ಕೋಟಿ ಇಡಬೇಕು ಎಂದು ಹೇಳಿದಿರಿ. ಒಂದು ನೀರಾವರಿ ಯೋಜನೆಯ ಪ್ರಾರಂಭಿಕ ಹಂತದಲ್ಲಿ ಸಂಪೂರ್ಣವಾಗಿ land acquisitionಗೆ ಬೇಕಾದ ಸರ್ವೆ topographic survey, detailed survey control mapping, alignment ಮತ್ತು submerged villages ಸಂಪೂರ್ಣವಾಗಿ survey ಅದರಲ್ಲಿ ಮನೆಗಳನ್ನು ಸರ್ವೆ ಮಾಡಬೇಕಾಗುತ್ತದೆ. ಊರುಗಳ ಸರ್ವೆ ಮಾಡಬೇಕಾಗುತ್ತದೆ ಮತ್ತೆ R & R ಕಟ್ಟುವುದಕ್ಕೆ land acquisition ಮಾಡಬೇಕಾಗುತ್ತದೆ. ಆದುದರಿಂದ ಯಾವುದಾದರೂ ನೀರಾವರಿ ಯೋಜನೆ ಇದ್ದರೆ ಅದಕ್ಕೆ parabolic curve ಎನ್ನುತ್ತಾರೆ. ಮೊದಲನೆ ವರ್ಷ ಕಡಿಮೆ ಇರುತ್ತದೆ. 2ನೇ ವರ್ಷ ಜಾಸ್ತಿಯಾಗುತ್ತದೆ. 3,4,5 ಈ ಮೂರು ಪ್ರಮುಖವಾದ ವರ್ಷಗಳು. ಅಲ್ಲಿ ಜಾಸ್ತಿಯಿರುತ್ತದೆ. ಮತ್ತೆ ಕಡಿಮೆಯಾಗುತ್ತದೆ. ಆದುದರಿಂದ ಒಂದು ಯೋಜನೆ ಯಾವ ವೇಗದಲ್ಲಿ ಆಗುತ್ತದೋ ಅದರ ಅವಶ್ಯಕತೆಗೆ ಅನುಗುಣವಾಗಿ ಹಣಕಾಸನ್ನು ನೀಡುತ್ತಿದ್ದೇವೆ. ಇವತ್ತು ಏನು DPR ಪ್ರಕಾರ ಇಡಬೇಕಾಗಿತ್ತು ಅದನ್ನು ಇಟ್ಟಿದ್ದೇವೆ. ಈಗಾಗಲೇ ಟೆಂಡರನ್ನು ಕರೆದಿದ್ದು, ಅದು ಕೊನೆಯ ಹಂತದಲ್ಲಿದೆ. ಮುಂದಿನ 15 ದಿನಗಳಲ್ಲಿ ಮುಳವಾಡ ಏತ ನೀರಾವರಿ ಯೋಜನೆಗೆ ನಾವು ಶಂಕು ಸ್ಥಾಪನೆಯನ್ನು ಕೂಡಾ ಹಾಕುತ್ತೇವೆ. ಆದ್ದರಿಂದ ಕಾಮಗಾರಿ ಪ್ರಾರಂಭವಾಗುತ್ತದೆ. ತಾವು ದಯವಿಟ್ಟು ಇಷ್ಟು ಬೇಗ ಆಗಿದೆ ಎನ್ನುವ ಒಂದು appreciation ಮಾಡುತ್ತೀರಿ ಎಂದು ಅಂದುಕೊಂಡಿದ್ದೇನೆ. ಉದಾಹರಣೆಗೆ ನೀವು ಹೇಳಿದ R & R ಬಗ್ಗೆ ಹೇಳಿದಿರಿ. ಇದರಲ್ಲಿ 2 ಇದೆ. ಬಾಗಲಕೋಟೆ ಶಹರ ಮತ್ತು ಗ್ರಾಮೀಣ ಪ್ರದೇಶ. ಬಾಗಲಕೋಟೆ ಶಹರದಲ್ಲಿ 521 ರಿಂದ 23 ರವರೆಗೆ UKP stage-3 ನಲ್ಲಿ ಬರುವಂತಹ ಸುಮಾರು 521 ಕೋಟಿ ರೂ. ಇವತ್ತು ಇಟ್ಟಿದ್ದೇವೆ. ಅಷ್ಟೇ ಅಲ್ಲ. ಈಗಾಗಲೇ ಅದನ್ನು approve ಕೂಡಾ ಮಾಡಿದ್ದೇವೆ. ಮೂಲಭೂತ ಸವಲತ್ತಿಗಾಗಿ 551 ಕೋಟಿ ರೂ. ಇಟ್ಟಿದ್ದೇವೆ. ಹಿಂದಿನ ಯಾವುದೇ ಸರ್ಕಾರ ಬಾಗಲಕೋಟೆಗೆ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಒಂದು ಬಾರಿಯೂ

ಕೊಟ್ಟಿಲ್ಲ. ಒಟ್ಟಾರೆ 1300 ಕೋಟಿ ರೂ. ಕಳೆದ 4 ವರ್ಷದಲ್ಲಿ ಬಾಗಲ ಕೋಟೆಗೆ compensation and development ಗೆ ಕೊಟ್ಟಿದ್ದೇವೆ. R & R ಬಾಗಲಕೋಟೆ town ಆದರೆ 76 ಸಾವಿರ ಎಕರೆ, ಏನು ಭೂಮಿ acquire ಮಾಡಬೇಕು, ಈಗಾಗಲೇ ಸಂಪೂರ್ಣವಾಗಿ ಸರ್ವೆ ಕಾರ್ಯಗಳು ನಡೆದಿವೆ. ಆ ಸರ್ವೆ ಕಾರ್ಯ ಮುಗಿದ ತಕ್ಷಣವೇ ಅಲ್ಲಿ land acquisition ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತು R & R villages ಗೆ ಈಗಾಗಲೇ ಹುಡ್ಕೋ ಜೊತೆಗೆ 2 ಸಾವಿರ ಕೋಟಿ ರೂ. MOU ಮಾಡಿದ್ದೇವೆ. ಸರ್ವೆ ಕಾರ್ಯ ಆಗಿ R & R fix ಮಾಡಿದ ತಕ್ಷಣವೇ ಅದರ ಲಾಭವನ್ನು ತೆಗೆದು ಕೊಂಡು ಆ ಕೆಲಸವನ್ನು ಕೂಡಾ ಮಾಡುತ್ತೇವೆ. ಏನು ಮುಳವಾಡ ಯೋಜನೆ ಮಾಡುತ್ತಿದ್ದೇವೆ. ಅದಕ್ಕೆ Canal survey ಕೂಡಾ ಪ್ರಾರಂಭ ಮಾಡಿದ್ದೇವೆ. Topographical survey ಆಗಿತ್ತು ಮುಂಚೆ. ಈಗ Canal survey, detailed survey ಕೂಡಾ ಮಾಡಿದ್ದೇವೆ. Alignment ಕೂಡಾ fix ಮಾಡುತ್ತಿದ್ದೇವೆ. ಆದುದರಿಂದ ನಮ್ಮ ಸರ್ಕಾರ ಯಾವುದೇ ಅಂಶದಲ್ಲಿಯೂ ಹಿಂದೆ ಬಿದ್ದಿಲ್ಲ. we're committed. UKP stage-3 ನಲ್ಲಿ ಪ್ರಮುಖವಾಗಿ ಮುಳವಾಡ lift ಏನಿದೆ, ಬಹಳ ದೊಡ್ಡ ಪ್ರಮಾಣದ ನೀರಾವರಿ ಆಗುವಂಥದ್ದು ಏನಿದೆ, ಸುಮಾರು ಐದೂವರೆ – ಆರು – ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿ ಆಗುವುದೇನಿದೆ, ಅದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಮ್ಮ ಇಡೀ ಇಲಾಖೆಯಲ್ಲಿಯೇ ಇದು ಅತ್ಯಂತ ಪ್ರಮುಖವಾದ ಯೋಜನೆ ಯಾಗಿದೆ. ಇದೊಂದು engine ಇದ್ದ ಹಾಗೆ. ಇದನ್ನು ಖಂಡಿತವಾಗಿಯೂ time bound ಪ್ರಕಾರ 7 ವರ್ಷದಲ್ಲಿ ಮುಗಿಸುವುದಕ್ಕೆ ನಾವು strong foundation ಹಾಕಿದ್ದೇವೆ. ಖಂಡಿತವಾಗಿಯೂ 7 ವರ್ಷದಲ್ಲಿ ಮುಗಿಸುತ್ತೇವೆ ಮತ್ತೆ ನಮ್ಮ ಸರ್ಕಾರ ಬಂದೇ ಬರುತ್ತದೆ. ನೀವು ಇದಕ್ಕೆ ಪ್ರಶ್ನೆ ಕೇಳುತ್ತಿ ರುತ್ತೀರಿ, ನಾವು ಉತ್ತರ ಹೇಳಿ ಕೆಲಸವನ್ನು ಕೂಡಾ ಮಾಡುತ್ತೇವೆ. ಅದರ ಬಗ್ಗೆ ಏನೂ ಚಿಂತೆ ಮಾಡುವ ಅವಶ್ಯಕತೆ ಇಲ್ಲ. ಅವರು ಕೇಳಿರುವ ನಿಖರವಾದ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಆಯಿತು. ಶ್ರೀಕಾಂತ ಕುಲಕರ್ಣಿಯವರು.

(ಗೊಂದಲ)

ಅಧ್ಯಕ್ಷರು : ನೀವು ಹೇಳಿದಂತೆ ಆಗುವುದಿಲ್ಲ. ನಾನು ಶ್ರೀಕಾಂತ ಕುಲಕರ್ಣಿಯವರನ್ನು ಕರೆದಿದ್ದೇನೆ. ಆಮೇಲೆ ಕೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ : ಹಿಂದೆ 28%, 29%, 30% ಇರುತ್ತಿತ್ತು. ಈಗ 13% ಗೆ ಬಂದಿದೆ.

ಅಧ್ಯಕ್ಷರು : ನಾನು ಶ್ರೀಕಾಂತ ಕುಲಕರ್ಣಿಯವರನ್ನು ಕರೆದಿದ್ದೇನೆ. Please, ಕುಳಿತುಕೊಳ್ಳಿ ಒಂದು ನಿಮಿಷ.

(ಗೊಂದಲ)

ಶ್ರೀ ಶ್ರೀಕಾಂತ ಕುಲಕರ್ಣಿ : ಸಭಾಧ್ಯಕ್ಷರೆ ಅವತ್ತು ನಮ್ಮ ಇಡೀ ಬಜೆಟ್‌ನಲ್ಲಿ (ಗೊಂದಲ) 15–20 ಸಾವಿರ ಕೋಟಿ ಇತ್ತು. Re-payment ಇತ್ತು ಆಗ. ಅವರು ಇಟ್ಟಿರುವ ದುಡ್ಡು ಸಾಲಕ್ಕೆ ಹೋಗುತ್ತಿತ್ತು. ಈಗ ಯಾವ ಬಾಂಡೂ ಇಲ್ಲ. ಸಾಲವೂ ಇಲ್ಲ.

(ಗೊಂದಲ)

ಅಧ್ಯಕ್ಷರು : ಇದೇನಿದು?

ಶ್ರೀ ಬಸವರಾಜ ಬೊಮ್ಮಾಯಿ : ಸನ್ಮಾನ್ಯ ಸಭಾಧ್ಯಕ್ಷರೆ, ಅವರೇನು 25% ಹೇಳುತ್ತಿದ್ದಾರೆ. ಅದರಲ್ಲಿ 10% ಸಾಲಕ್ಕೆ ಹೋಗುತ್ತಿತ್ತು ಹಿಂದೆ. ಈಗ ಯಾವ ಬಾಂಡೂ ಇಲ್ಲ, ಸಾಲವೂ ಇಲ್ಲ. ಸಂಪೂರ್ಣವಾಗಿ works ಕೊಡುತ್ತಿದ್ದೆವೆ.

ಶ್ರೀ ಎಂ.ಬಿ. ಪಾಟೀಲ : ನಾವು ಇದನ್ನು ಜನರ ಬಳಿ ಒಯ್ಯುತ್ತೇವೆ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಬಹಳ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಎಂ.ಬಿ.ಪಾಟೀಲ್ ರವರು ಅದನ್ನು ತಿಳಿದುಕೊಳ್ಳಬೇಕಾಗಿದೆ. ನಾವೂ ಕೂಡಾ ಆ ಭಾಗದಲ್ಲಿ ಬರುತ್ತೇವೆ. ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ಜಿಲ್ಲೆಯಲ್ಲಿ 11 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿದ್ದಾರೆ. ಆದರೆ ನಮ್ಮದೂ ಕೂಡಾ ಕೆಲಸ ಪ್ರಾರಂಭ ವಾಗಬೇಕೆಂಬ ಚಿಂತನೆ ಇದೆ. ಬೊಮ್ಮಾಯಿ ಸಾಹೇಬರು ಏನು ಹೇಳಿದರು ಇಷ್ಟು ಹೊತ್ತು. ಇವತ್ತಿನವರೆಗೆ 1/3 grant ಇತ್ತು. ಮುಳವಾಡ ಏತ ನೀರಾವರಿ ಪ್ರಾರಂಭಿಸುವುದನ್ನು ನಾವು ಅಭಿನಂದಿಸಬೇಕಾಗುತ್ತದೆ. ಸುಮಾರು 17 ಸಾವಿರ ಕೋಟಿ ರೂ. ಹಣ ಖರ್ಚು ಮಾಡಬೇಕಾಗಿದೆ. ಇವತ್ತಿನ ಬರದ

ಪರಿಸ್ಥಿತಿ ಹಿನ್ನೆಲೆಯನ್ನು ಅವಲೋಕಿಸಿದಾಗ ನೀರಾವರಿಗೆ ಒತ್ತು ಕೊಡುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಕೊಪ್ಪಳ ಜಿಲ್ಲೆಗೆ ಯಲ್ಬುರ್ಗಾ, ಕುಷ್ಟಗಿ ಮತ್ತು ಗಂಗಾವತಿ, ಕನಕಗಿರಿ ಕ್ಷೇತ್ರಗಳಿಗೆ ಇವತ್ತು ಯಾವ ಭಾಗದಿಂದ ಏನು ನೀವು ಇಸ್ಲಾಂಪುರದಿಂದ alignment ಮಾಡುತ್ತಿದ್ದೀರಾ ಏನು ಎಂಬ ಮಾಹಿತಿಯನ್ನು ಮಾನ್ಯ ಮಂತ್ರಿಗಳು ತಿಳಿಸಿ. ನಮ್ಮ ಜಿಲ್ಲೆಗೆ ಏನು allocation ಮಾಡಿದ್ದೀರಿ, ಆ ಕೆಲಸ ಕೂಡ ಪ್ರಾರಂಭವಾಗಬೇಕೆಂದು ಅಧ್ಯಕ್ಷರ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಜಲ ಸಂಪನ್ಮೂಲ ಸಚಿವರನ್ನು ಕೇಳಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ, ನನ್ನ ಕ್ಷೇತ್ರವಾದ ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು 30 ಹಳ್ಳಿಗಳು ಮುಳುಗಡೆಗೆ ಬರುತ್ತವೆ. 30 ಹಳ್ಳಿಗಳು ಎಂದರೆ ಸುಮಾರು ಹತ್ತಾರು ಸಾವಿರ ಎಕರೆಯನ್ನು ನಾವು ಆಲಮಟ್ಟಿ ಯೋಜನೆಯೊಳಗೆ ಕಳೆದುಕೊಂಡಿದ್ದೇವೆ. ಆದರೆ ಜಮಖಂಡಿ ತಾಲ್ಲೂಕಿಗೆ ಯಾವುದೇ ಯೋಜನೆಗಳು ಇಲ್ಲ. ಉಳಿದಂತಹ ಜಮೀನುಗಳಲ್ಲಿ ಯಾವುದೇ ರೀತಿಯಾದ ಯೋಜನೆ ಮಾಡಿಲ್ಲ. ಆ ಕಾರಣಕ್ಕಾಗಿ ನನ್ನದು ಒಂದೇ ಒಂದು ಬೇಡಿಕೆ ಇದೆ. ಸುಮಾರು 4 ಕ್ಷೇತ್ರ ಇದೆ.

(ಗೊಂದಲ)

ಶ್ರೀ ಸಿದ್ದು ಸವದಿ : ನನಗೇಕೆ object ಮಾಡುತ್ತಿದ್ದೀರಿ?

ಅಧ್ಯಕ್ಷರು : ಮುಗಿಸೋಣ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇದು ಕೃಷ್ಣಾ ನದಿ ವಿಚಾರ.

(ಗೊಂದಲ)

ಶ್ರೀ ಸಿದ್ದು ಸವದಿ : ಅಧ್ಯಕ್ಷರೆ, ಕೃಷ್ಣಾ ನದಿ ವಿಚಾರ ಎಲ್ಲರಿಗೂ ಸೇರಿದ್ದು.

(ಗೊಂದಲ)

ಅಧ್ಯಕ್ಷರು : ಇದು ಯಾವುದೂ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದು ಸವದಿ : ಸಮಯ ಕೊಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಅವರು ಮಾತನಾಡುವಾಗ ಸುಮ್ಮನೇ ಕುಳಿತು ಕೇಳಿದ್ದಾರೆ. ಈಗ ಅವರಿಗೆ ಮಾತನಾಡಲು ಅವಕಾಶ ಕೊಡಿ, ಅವರು ಆ ಭಾಗದಿಂದ ಬಂದಿದ್ದಾರೆ. ಸಂತ್ರಸ್ತರು ಇದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಅವರು ಮಾತನಾಡಲಿ, ಅವರು ಕೇಳಲಿ, ನಿವ್ಯಾಕೆ ಅಡ್ಡಿಪಡಿಸುತ್ತಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್ : ನಾವು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಏಕೆ ಹೀಗೆ ಮಾಡುತ್ತಿದ್ದೀರಿ? ಏಕೆ ಎಮೋಷನ್ ಆಗುತ್ತಿದ್ದೀರಿ?

ಶ್ರೀ ಎಂ.ಬಿ. ಪಾಟೀಲ್ : ಎಮೋಷನ್ ಆಗುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇದು ಒಟ್ಟಿಗೇ ಸರಿ ಮಾಡುವ ಕೆಲಸ ಇದೆ, ಒಬ್ಬರೇ ಮಾಡುವ ಕೆಲಸ ಅಲ್ಲ. ದಯವಿಟ್ಟು.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು 30 ಹಳ್ಳಿಯೊಳಗೆ ಹತ್ತಾರು ಸಾವಿರ ಎಕರೆ ಮುಳುಗಿದಾಗ ಈಗ ಮಾತನಾಡುವವರಿಗೆ ನೀರು ಹೋಗಿದೆ. ಇಲ್ಲಿ ಮಾತನಾಡುತ್ತಾರೆ ಅಷ್ಟೇ. ನಾವು ಅಲ್ಲಿ ಸಂತ್ರಸ್ತರು. ನಮಗೆ ನಿಯಮಿತವಾಗಿ ಸಂತ್ರಸ್ತರ ನೆರವಿಗೆ ಬರಬೇಕು. ಆ ಕಾರಣಕ್ಕಾಗಿ ಒಂದೇ ಒಂದು ನಮ್ಮ ಬೇಡಿಕೆ ಇದೆ. ಸುಮಾರು 4–5 ಕ್ಷೇತ್ರಗಳಿಗೆ ಅದನ್ನು ಅಳವಡಿಸಬಹುದು. ಒಂದು ಸೊಸಲಟ್ಟಿ ಏತ ನೀರಾವರಿ ಯೋಜನೆಯನ್ನು ನಾನು ಬೇಡಿದ್ದೇನೆ. ಮಾನ್ಯ ಸಚಿವರು ಅಲ್ಲಿ ಬಂದು spot inspection ಮಾಡಿದ್ದಾರೆ. ನಾವು ಉಳುವಂತಹ ಜಮೀನು ಗಳಿಗೆ ನೀರಾವರಿ ಮಾಡಿಕೊಡಲಿಕ್ಕೆ ನಮಗೆ ಒಂದು ಸೊಸಲಟ್ಟಿ ಚಿಮ್ಮಡಿ ಏತ ನೀರಾವರಿ ಯೋಜನೆ ಬೇಡಿಕೆ ಇಟ್ಟಿದ್ದೇನೆ. ಅದನ್ನು ಮಂಜೂರು ಮಾಡಿಕೊಡಬೇಕೆಂದು ಇಷ್ಟು ಮಾತ್ರ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಯಾವುದೇ ರೀತಿಯ ಯೋಜನೆಗೆ ಅಡ್ಡಿಪಡಿಸುವಂತಹ ಕೆಲಸ ಮಾಡಿಲ್ಲ. ನಾವು ನಿಜವಾದ ಸಂತ್ರಸ್ತರು ಇದ್ದೇವೆ. ನಮ್ಮ ಮುಳುಗಡೆ ಆಗಿರುವಂತಹ ಜಮೀನುಗಳಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಇನ್ನೂ 4–5 ಹಳ್ಳಿಗಳು ಮುಳುಗಡೆ ಆಗುವುದರಲ್ಲಿದೆ. ಅದಕ್ಕೂ ಸಹಿತ ನಮಗೆ ತೊಂದರೆ ಇಲ್ಲ. ಈ ಬೇಡಿಕೆಗಳಲ್ಲಿ ಕಳಕಳಿಯನ್ನು ವ್ಯಕ್ತಪಡಿಸುವುದಕ್ಕೆ ಮಾಡಿದ್ದೇವೆಯೇ

ವಿನಹ ಮತ್ತೇನೂ ಅಡ್ಡಿ ಮಾಡುವುದಕ್ಕೆ ನಾವು ಮಾಡಿಲ್ಲ. ಅವರು ತಾಸುಗಟ್ಟಲೆ ಮಾತನಾಡಿದ್ದಾರೆ, ನಾವೇನೂ ಅಡ್ಡಿ ಬಂದಿಲ್ಲ. ನಮ್ಮ ಕ್ಷೇತ್ರದ ಪರವಾಗಿ ಬೇಡಿಕೆಗೆ ಮಾನ್ಯ ಸಚಿವರು ಉತ್ತರ ಹೇಳಬೇಕು. ಆ ಏತ ನೀರಾವರಿ ಯೋಜನೆ ಬಗ್ಗೆ ನೀರಿನ ಅಲೋಕೇಷನ್ ಇಟ್ಟುಕೊಂಡು ನಮಗೆ ಮಂಜೂರು ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ನಿಜವಾಗಲೂ ನೂರಕ್ಕೆ ನೂರರಷ್ಟು ಸಂತ್ರಸ್ತರು ನಾವಿದ್ದೇವೆ. ನಾವು ತಲೆತಲಾಂತರದಿಂದ ಬಂದಿರತಕ್ಕಂತಹ ಆಸ್ತಿ ಪಾಸ್ತಿ, ಮನೆ ಮಠಗಳನ್ನು ಕಳೆದುಕೊಂಡು ಗುಳೆ ಹೊರಟಿದ್ದೇವೆ. ನಿಜವಾಗಲೂ ನಮ್ಮ ಸಹಾಯಕ್ಕೆ ಸರ್ಕಾರ ಬರಬೇಕು. ನಮ್ಮ ತಾಲ್ಲೂಕಿಗೆ ಏನೂ ಮಾಡಿಲ್ಲ. ಜಮಖಂಡಿ ತಾಲ್ಲೂಕಿಗೆ ಏನಾದರೂ ಮಾಡಿದ್ದೀರಾ ಎಂದು ಮಾನ್ಯ ಸಚಿವರು ಹೇಳಬೇಕು. ಈ ಅಲಮಟ್ಟಿ ಸಂತ್ರಸ್ತರಿಗೆ ಏನು ಮಾಡಿದ್ದೇವೆಂದು ಅವರು ಹೇಳಲಿ. ಒಂದು demand ಇದೆ, ನಾಲ್ಕು ಕ್ಷೇತ್ರ ಇದೆ. ನಮ್ಮದು, ಮಾನ್ಯ ಶ್ರೀಕಾಂತ ಕುಲಕರ್ಣಿಯವರದ್ದು, ಮಾನ್ಯ ಗೋವಿಂದ ಕಾರಜೋಳ್ ಅವರದ್ದು, ಮಾನ್ಯ ಮುರುಗೇಶ್ ನಿರಾಣಿ ಅವರದ್ದು. ಈ ನಾಲ್ಕು ಕ್ಷೇತ್ರಕ್ಕೆ ಅನುಕೂಲ ಆಗುತ್ತದೆ. ಆ ಕಾರಣಕ್ಕಾಗಿ ಇಲ್ಲಿ ಆಶ್ವಾಸನೆ ಕೊಡಬೇಕು. ಇಂತಿಷ್ಟೇ ದಿವಸದಲ್ಲಿ ನಾವು ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆ ಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಕೃಷ್ಣಾ ನದಿ, ಆ ಭಾಗದ ಸಮಸ್ಯೆಗಳು, ಆಗತಕ್ಕಂತಹ ನೀರಾವರಿ ಯೋಜನೆಗಳು..

ಅಧ್ಯಕ್ಷರು : ಎರಡೇ ನಿಮಿಷದಲ್ಲಿ ಮುಗಿಸಿ Clarification.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ನೀರಾವರಿ ಯೋಜನೆಗಳ ಬಗ್ಗೆ ಅನೇಕ ಶಾಸಕರು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಅದರಲ್ಲಿ ನನಗೆ ಒಂದು ನೋವು ಎನಿಸುವುದು ಏನೆಂದರೆ ನಮ್ಮ ಭಾರತೀಯ ಜನತಾ ಪಾರ್ಟಿ ಸರ್ಕಾರ ಇವತ್ತು ಅಧಿಕಾರಕ್ಕೆ ಬಂದ ಮೇಲೆ ನೀರಾವರಿ ಬಗ್ಗೆ ವಿಶೇಷವಾದಂತಹ ಅಸಕ್ತಿಯನ್ನು ವಹಿಸಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ನೀರಾವರಿ ಮಂತ್ರಿಗಳು ಈ ಯೋಜನೆಗಳನ್ನು ಶತಾಯಗತಾಯ ಜಾರಿಗೆ ತರಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಎರಡು ಮೂರು ಬಾರಿ ನಮ್ಮ ಅಖಂಡ ಜಿಲ್ಲೆಯ ಜನಪ್ರತಿನಿಧಿಗಳನ್ನು ಕರೆದು ಎಲ್ಲೆಲ್ಲಿ ಏನೇನು ಕೆಲಸ

ಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಸೂಚನೆಗಳು, ಇತ್ಯಾದಿಗಳ ಬಗ್ಗೆ ಚರ್ಚೆ ಮಾಡಿ ನಮ್ಮ ಆ ಭಾಗದ ಜನತೆಗೆ, ರೈತರಿಗೆ ಸಮಾಧಾನ ಆಗುವ ತರಹ ಅನೇಕ ಯೋಜನೆಗಳನ್ನು ಜಾರಿಗೆ ತೆಗೆದುಕೊಂಡಿದ್ದಾರೆ. ಜಾರಿಗೆ ತಂದಿದ್ದರೂ ಹಣಕಾಸಿನ ವ್ಯವಸ್ಥೆ ಸ್ವಲ್ಪ ಹಿಂದೆ ಮುಂದೆ ಆಗಿರಬಹುದು, ಅಂಕಿ ಅಂಶಗಳ ಕುರಿತು ಸನ್ಮಾನ್ಯ ನಮ್ಮ ಎಂ.ಬಿ. ಪಾಟೀಲ್ ಅವರು ಸಾಕಷ್ಟು ವಿವರಗಳನ್ನು ಕೊಟ್ಟರು. ಅದೆಲ್ಲವನ್ನೂ ಹೊಂದಿಸಿಕೊಂಡು ಹಣಕಾಸಿನ ಕೊರತೆ ಆಗದಂತೆ ನಮ್ಮ ಯೋಜಿತವಾದಂತಹ ಎಲ್ಲಾ ಯೋಜನೆಗಳನ್ನು ಜಾರಿಗೆ ತಂದು ಆ ಭಾಗದ ಬರಪೀಡಿತ ಪ್ರದೇಶಕ್ಕೆ ನೀರು ಕೊಡಬೇಕೆನ್ನುವಂತಹ ಸಂಕಲ್ಪವನ್ನು ನಮ್ಮ ಸರ್ಕಾರ ತೊಟ್ಟಿದೆ. ಇದರಿಂದ ನಾವು ಬರುವಂತಹ ಹತ್ತು ವರ್ಷ ನೀರಾವರಿ ದಶಕ ಎಂದು ಘೋಷಣೆ ಮಾಡಿ ನಮ್ಮದೇ ಆದಂತಹ ಕಾರ್ಯಕ್ರಮವನ್ನು ಹಾಕಿಕೊಂಡು, ಸಂಪನ್ಮೂಲ ಜೋಡಿಸಿಕೊಂಡು ಕೆಲಸ ಮಾಡುವಂತಹ ಸರ್ಕಾರ ಇದ್ದಾಗ ಯಾವ ಕೆಲಸಗಳು ಆಗಬೇಕೆನ್ನುವಂತಹ ಸಲಹೆಗಳನ್ನು ನಾವು ಇಲ್ಲಿ ಸದನದಲ್ಲಿ ಕೊಡಬೇಕು. ಮಾಡಿರುವಂತಹ ಒಂದು ಒಳ್ಳೆಯ ಕೆಲಸಕ್ಕೆ ನಾವು ಬೆಂಬಲ ಕೊಟ್ಟರೆ ಬಹುಶಃ ಇನ್ನಷ್ಟು ಸಂತೋಷದಿಂದ ಕೆಲಸ ಮಾಡಲಿಕ್ಕೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಸಾಧ್ಯವಾಗುತ್ತದೆ.

ಅಧ್ಯಕ್ಷರು : ಆಯಿತು, ಮುಗಿಸಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಆದರೆ ಇವತ್ತು ನಮ್ಮ ಸ್ನೇಹಿತರು ಆಕ್ರೋಶವನ್ನು ವ್ಯಕ್ತಮಾಡುತ್ತಿದ್ದಾರೆ, ಸಿಟ್ಟನ್ನು ವ್ಯಕ್ತಪಡಿಸುತ್ತಿದ್ದಾರೆ? ಇದು ಯಾವಾಗ ಸಿಟ್ಟು ಏಳಬೇಕಾಗಿತ್ತು, ಆವಾಗ ಸಿಟ್ಟು ಏಳಬೇಕಾಗಿತ್ತು.

ಅಧ್ಯಕ್ಷರು : ನೀವು ಇದರ ಬಗ್ಗೆ ಮಾತನಾಡಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಎರಡೇ ನಿಮಿಷ. ಆ ಭಾಗ ಬಿಜಾಪುರ ಜಿಲ್ಲೆ ಇರಬಹುದು, ಬಾಗಲಕೋಟೆ ಜಿಲ್ಲೆ ಇರಬಹುದು, ಈ ಹಿಂದೆ ತಮಗೆಲ್ಲಾ ಗೊತ್ತಿರುವಂತೆ ಕೊಯ್ನಾ ಡ್ಯಾಂ ಕಟ್ಟುವಾಗ ಬರಬೇಕಾದಂತಹ 25 ಟಿ.ಎಂ.ಸಿ. ನೀರು ಇಲ್ಲಿ ಬಂದು ಬಿಟ್ಟಿದ್ದರೆ.....

ಅಧ್ಯಕ್ಷರು : Please, ಮುಗಿಸಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಹಿಂದಿನ ಸರ್ಕಾರ, ಹಿಂದಿನ ಮುಖ್ಯಮಂತ್ರಿಗಳು ಸ್ಪಂದನ ನೀಡಿ ಅವತ್ತು ಬಹಳಷ್ಟು ಅಣೆಕಟ್ಟು ಕಟ್ಟಿದ್ದರೆ ಇವತ್ತು ದುರಂತ ಆಗುತ್ತಿರಲಿಲ್ಲ, ಬರಗಾಲದ ಸಮಸ್ಯೆಗಳು ಆಗುತ್ತಿರಲಿಲ್ಲ.

ಇಂದು ನಮ್ಮ ಎಂ.ಬಿ. ಪಾಟೀಲ್ ಅವರು ಉಗ್ರಾವೇಶದಿಂದ ಮಾತನಾಡುವ ಅವಶ್ಯಕತೆ ಇರಲಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಅವರನ್ನು ನೋಡಿ ಮಾತನಾಡಬೇಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಈ ರೀತಿ ಮಾತನಾಡುವುದು ಸರಿಯಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : Please, ಮುಗಿಸಿ. ಶ್ರೀಕಾಂತ್ ಕುಲಕರ್ಣಿಯವರೇ, ನೀವು ಅವರನ್ನು ಉದ್ದೇಶಿಸಿ ಮಾತನಾಡಬೇಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಇವರೇನು ಮಾಡಿದ್ದಾರೆಂದು ಅಷ್ಟು ಹೇಳಲಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಆ ಯೋಜನೆಗಳಿಗೆ ನೀವು ಬೆಂಬಲ ಸೂಚಿಸುವುದನ್ನು ಬಿಟ್ಟು ಈ ರೀತಿ ಮಾತನಾಡುವುದು ಚಲೋ ಎನಿಸುವುದಿಲ್ಲ.

(ಗೊಂದಲ)

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಸರ್ಕಾರ ಮಾಡುವಂತಹ ಯೋಜನೆಗಳನ್ನು ಬೆಂಬಲಿಸಿ ಇವತ್ತು ಹಣಕಾಸಿನ ಕೊರತೆಯನ್ನು ತುಂಬಿಕೊಂಡು ಕೆಲಸ ಮಾಡತಕ್ಕಂತಹ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ನಾವು ಇವತ್ತು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಅನಾಥರಾಗಿದ್ದೇವೆ. ಜಮಖಂಡಿ ತಾಲ್ಲೂಕು ಇರಬಹುದು, ಬಿಜಾಪುರ ತಾಲ್ಲೂಕು ಇರಬಹುದು, ಬೀಳಗಿ ತಾಲ್ಲೂಕು ಇರಬಹುದು. ನಮ್ಮ ಉಳಿದಿರುವಂತಹ ಜಮೀನಿಗೆ ನೀರು ಕೊಡಬೇಕೆಂದು ಸಂಕಲ್ಪ ತೊಟ್ಟಿದ್ದಾರೆ. ತಮ್ಮ ಕ್ಷೇತ್ರ ಬಬಲೇಶ್ವರ, ಸಾವಳಗಿ ಸೇರಿ 2.1 ಟಿಎಂಸಿ ನೀರನ್ನು ಗೋದಾವರಿಗೆ ಡೈವರ್ಷನ್ ಕೊಟ್ಟಿರತಕ್ಕದ್ದನ್ನು ಉಲ್ಲೇಖ ಮಾಡಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ದೊಡ್ಡನಗೌಡ ಪಾಟೀಲ್ ಅವರು ಮಾತನಾಡಲಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಅಧ್ಯಕ್ಷರೆ, ನನಗೆ ಒಂದು ಮಾತು ಹೇಳಲು ಅವಕಾಶ ಕೊಡಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಜನರ ಪರವಾಗಿ ಇರುವಂತಹ ಭಾವನೆಯನ್ನು ವ್ಯಕ್ತಪಡಿಸಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ನಿಮ್ಮ ವಿಚಾರ ನೀವು ಹೇಳಿಕೊಳ್ಳಿ.

ಅಧ್ಯಕ್ಷರು : ಮುಗಿಸಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಇವತ್ತು ನಮ್ಮ ಭಾವನೆಗಳು ಕ್ರಿಯಾಶೀಲವಾಗಿ ಕೆಲಸ ಮಾಡತಕ್ಕಂತಹ ಸರ್ಕಾರಕ್ಕೆ ನಾವು ಚುನಾಯಿತ ಪ್ರತಿನಿಧಿಗಳು ಬೆಂಬಲಿಸಬೇಕು, ಸಾರ್ವಜನಿಕರೂ ಬೆಂಬಲಿಸಬೇಕು.

(ಗೊಂದಲ)

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಸತ್ಯ ಸತ್ಯವೇ. ಸರ್ಕಾರ ಮಾಡುವಂತಹ ಕೆಲಸಗಳಿಗೆ ನಾವು ಬೆಂಬಲ ಕೊಡೋಣ. ಹೋರಾಟ ಮಾಡುವಂತಹ ಅಗತ್ಯ ಇಲ್ಲ. ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ. ಆ ಭಾಗದ ಜಿಲ್ಲೆಯ ಇಂಚು ಇಂಚು ನೀರಾವರಿ ಮಾಡಬೇಕೆಂದು ಕಲ್ಪನೆ ಇಟ್ಟುಕೊಂಡು ಇವತ್ತು ನಮ್ಮ ಸರ್ಕಾರ ಯೋಜನೆಗಳನ್ನು ಜಾರಿಗೆ ತಂದಿದೆ.

ಅಧ್ಯಕ್ಷರು : ಉತ್ತರ ಹೆಳಿ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ : ಕೆಲಸ ಮಾಡುವಂತಹ ಕ್ರಿಯಾಶೀಲ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ...

ಶ್ರೀ ದೊಡ್ಡನಗೌಡ ಜಿ. ಪಾಟೀಲ್ (ಹುನಗುಂದ) : ಸನ್ಮಾನ್ಯ ಅಧ್ಯಕ್ಷರೆ, ಈ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಅಕಂಡ ಬಿಜಾಪುರ ಜಿಲ್ಲೆಯ ಸಾಕಷ್ಟು ಗ್ರಾಮಗಳು ಮುಳುಗಡೆ ಆಗಿದೆ ಎನ್ನತಕ್ಕದ್ದು ಸದನಕ್ಕೆ ಗೊತ್ತು. ಇಲ್ಲಿ ಈಗ ಚರ್ಚೆ ಆಗುತ್ತಿರತಕ್ಕಂತಹ ಸಂದರ್ಭದಲ್ಲಿ ಬಹುಶಃ ನಮ್ಮ ಸರ್ಕಾರ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟು ಈ ಮೂರನೇ ಹಂತದ ಯೋಜನೆಗಳನ್ನು ಕೈಗೆತ್ತಿಕೊಂಡು ಹಣಕಾಸಿನ ವ್ಯವಸ್ಥೆಯನ್ನು ಒದಗಿಸಿ ಶೀಘ್ರವೇ ಈ ಒಂದು ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕು ಮತ್ತು ಈ ಯೋಜನೆಯನ್ನು ಆದಷ್ಟು ಬೇಗ ಸಂಪೂರ್ಣಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ಕಾರ್ಯೋನ್ಮುಖ

ಆಗಿರತಕ್ಕಂತಹ ಜಲ ಸಂಪನ್ಮೂಲ ಸಚಿವರಿಗೆ ನಾನು ಅಭಿನಂದನೆಗಳನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇಲ್ಲಿ ಮುಖ್ಯವಾಗಿ ನನ್ನ ಮತಕ್ಷೇತ್ರದ, ನನ್ನ ತಾಲ್ಲೂಖಿನ ಸುಮಾರು 27 ಗ್ರಾಮಗಳು ನಾರಾಯಣಪುರ ಡ್ಯಾಮಿನ ಹಿನ್ನೀರಿನಲ್ಲಿ ಮುಳುಗಡೆಯಾಗಿವೆ. ಇನ್ನೂ 3 ಗ್ರಾಮಗಳು ಮುಳುಗಡೆ ಆಗಬೇಕಾಗಿದೆ. ಮೊನ್ನೆ 2009ರಲ್ಲಿ ಬಂದಂತಹ ನೆರೆ ಹಾವಳಿಯಲ್ಲಿ ತೊಂದರೆಗೊಳಗಾಗಿದ್ದ 9 ಗ್ರಾಮಗಳು ಈಗಾಗಲೇ 'ಆಸರೆ' ಯೋಜನೆಯಲ್ಲಿ ಸ್ಥಳಾಂತರಗೊಂಡಿರುವುದು ಸರ್ಕಾರದ ಗಮನಕ್ಕೆ ಇದೆ ಎಂದು ಭಾವಿಸುತ್ತೇನೆ. ನಾನು ಮುಖ್ಯವಾಗಿ ಇಲ್ಲಿ ಹೇಳಬೇಕಾಗಿರುವುದೇನೆಂದರೆ, ಹುನಗುಂದ ತಾಲ್ಲೂಕಿನಲ್ಲಿ ಸುಮಾರು 35 ಗ್ರಾಮಗಳು ಮುಳುಗಡೆಯಾಗಿ, ಸಾವಿರಾರು ಫಲವತ್ತಾದ ಭೂಮಿಯನ್ನು ಕಳೆದುಕೊಂಡಿದ್ದರೂ ಕೂಡ,.....

ಅಧ್ಯಕ್ಷರು : ಇದು clarification ಕೇಳಿದಂತೆ ಆಗುವುದಿಲ್ಲ.

ಶ್ರೀ ದೊಡ್ಡನಗೌಡ ಜಿ. ಪಾಟೀಲ : ಈ ಹುನಗುಂದ ತಾಲ್ಲೂಕನ್ನು ಸಮಗ್ರ ನೀರಾವರಿಗೆ ಒಳಪಡಿಸಬೇಕೆಂಬ ಬೇಡಿಕೆಯನ್ನು ಇಟ್ಟುಕೊಂಡು ಹಲವಾರು ಸಂದರ್ಭಗಳಲ್ಲಿ ಹೋರಾಟವನ್ನೂ ಕೂಡ ಮಾಡಿರತಕ್ಕಂಥದ್ದು ಮತ್ತು .....

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಪಾಟೀಲ್‌ರೆ, ತಾವು ಕೇಳುತ್ತಿರುವುದು clarification ಆಗುವುದಿಲ್ಲ.

ಶ್ರೀ ದೊಡ್ಡನಗೌಡ ಜಿ.ಪಾಟೀಲ್ : ಸಾರ್, ನಮ್ಮ ಭಾಗದಲ್ಲಿ ಸಮಸ್ಯೆ ಇದೆ. ದಯವಿಟ್ಟು ಅದನ್ನು ಮಾನ್ಯ ಸಚಿವರಲ್ಲಿ ಹೇಳಿಕೊಳ್ಳಲು ಅವಕಾಶ ಮಾಡಿಕೊಡಿ. ಇಲ್ಲಿಯವರೆಗೂ ನಮಗೆ ಯಾವುದೇ ಅವಕಾಶ ಕೊಟ್ಟಿರಲಿಲ್ಲ. 2012–13ನೇ ಸಾಲಿನ ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಮಗ್ರ ಹುನಗುಂದ ತಾಲ್ಲೂಕನ್ನು ನೀರಾವರಿಗೆ ಒಳಪಡಿಸುತ್ತೇವೆ ಎಂದು ಹೇಳಿದರು. ಅಲ್ಲದೆ ಈ ಬಗ್ಗೆ ಬಜೆಟ್‌ನಲ್ಲಿ announce ಕೂಡ ಮಾಡಿದ್ದಾರೆ. ಆ ಒಂದು ಯೋಜನೆಯನ್ನು ಆದಷ್ಟು ಶೀಘ್ರ ಗತಿಯಲ್ಲಿ ಕೈಗೆತ್ತಿಕೊಂಡು ನಮ್ಮ ಹುನಗುಂದ ತಾಲ್ಲೂಕನ್ನು ಸಮಗ್ರ ನೀರಾವರಿಗೆ ಒಳಪಡಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ಒಂದು ವಿನಂತಿ ಏನೆಂದರೆ, ಮರೋಳ ಏತ ನೀರಾವರಿ ಯೋಜನೆಯ ಎರಡನೇ jackwell ಮುಖಾಂತರ ಈಗಾಗಲೇ ಅಂದಾಜು 25 ಸಾವಿರ

ಎಕರೆ ಭೂಮಿಗೆ micro irrigation ಒದಗಿಸಬೇಕೆಂಬ ಯೋಚನೆಯನ್ನೇನು ಮಾಡಿದ್ದಾರೋ, ಅದನ್ನು ಜಾರಿಗೆ ತರಬೇಕು. ಉಳಿದ ಭಾಗ, ಪೂರ್ವ ಮತ್ತು ದಕ್ಷಿಣ ಭಾಗದ ಗ್ರಾಮಗಳಿಗೇನು ಸರ್ಕಾರ ಈಗಾಗಲೇ ಏನು ಘೋಷಣೆಯನ್ನು ಮಾಡಿದೆಯೋ, ಅದನ್ನು ಜಾರಿಗೆ ತರಬೇಕು. ಹುನಗುಂದ ತಾಲ್ಲೂಕನ್ನು ಸಂಪೂರ್ಣ ನೀರಾವರಿ ಯೋಜನೆಗೆ ಒಳಪಡಿಸುತ್ತೇವೆಂದು ಏನು ಹೇಳಿದ್ದಾರೋ, ಅದನ್ನೂ ಕೂಡ ಆದಷ್ಟು ಬೇಗ ಮಾಡಬೇಕು. Micro irrigation systemನಲ್ಲಿ ಈ ಒಂದು ಕಾಮಗಾರಿಯನ್ನು ಕೈಗೊಂಡು, ನಮ್ಮ ಭಾಗದ ಬರಗಾಲದ ಬವಣೆಯನ್ನು ನೀಗಿಸಬೇಕೆಂದು ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಕೃಷ್ಣಾ ನ್ಯಾಯ ಮಂಡಳಿಯ 3ನೇ ಸ್ಟೇಜ್ ಬಗ್ಗೆ ಮಾನ್ಯ ಎಂ.ಬಿ. ಪಾಟೀಲರು ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನೂ ಕೊಟ್ಟಿದ್ದಾರೆ. ಇದು ಬಹಳ ದಿವಸದ ಒಂದು ತೊಂದರೆದಾಯಕವಾದಂತಹ ಸ್ಕೀಮ್. ಆದರೆ ಇದಕ್ಕೊಂದು speed up ಸಿಕ್ಕಿದ್ದು, ಇದೇ ನಾಲ್ಕು ವರ್ಷದಲ್ಲಿ. ಮೊದಲಿನಿಂದಲೂ ಕೂಡ ಸ್ಪೀಡ್ ಇರಲಿಲ್ಲ. 1964 ರಲ್ಲಿ ಇದು ಪ್ರಾರಂಭವಾಯಿತು. 20 ವರ್ಷ ಏನೂ ಆಗಲಿಲ್ಲ. 1983 ರಿಂದ ಸ್ವಲ್ಪ ಏನೋ ಕೆಲಸ ಪ್ರಾರಂಭವಾಯಿತು. ಆದರೆ ನಾಲ್ಕು ವರ್ಷಗಳಲ್ಲಿ ಇವತ್ತು ಈ ಕೆಲಸಕ್ಕೆ ಏನೋ ಒಂದು speed up ಸಿಕ್ಕಿದೆ. ನಾವೂ ಕೂಡ ಹೋರಾಟ ಮಾಡಿ ಬಂದವರು. ಮಾನ್ಯ ದೊಡ್ಡನಗೌಡ ಪಾಟೀಲ್‌ರವರು ಇರಬಹುದು, ನಾನು ಇರಬಹುದು, ಬೇಕಾದಷ್ಟು ಲಕ್ಷಾಂತರ ಎಕರೆಗಳಷ್ಟು ಜಮೀನನ್ನು ಕಳೆದುಕೊಂಡು, ಜಿಲ್ಲಾ ಮುಖ್ಯ ಕೇಂದ್ರ ಮುಳುಗಡೆಯಾಗಿ, ನಾವೂ ಕೂಡ ಸಾಕಷ್ಟು ಹೋರಾಟ ಮಾಡಿ ಬಂದಂತಹವರು. ನಾವು ಹೋರಾಟ ಮಾಡಿದಾಗ, ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮನ್ಯ ಯಡಿಯೂರಪ್ಪನವರು ಅಲ್ಲಿಗೆ ಬಂದು, ಹಗಲು ರಾತ್ರಿ ಹೋರಾಟ ಮಾಡಿದರು. ಎಸ್.ಎಂ ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು, ಅವರು ಬಾಗಲಕೋಟೆಗೆ ಬಂದು, 637 ಕೋಟಿ ರೂ.ಗಳ ಪ್ಯಾಕೇಜ್ ಕೊಡುತ್ತೇವೆಂದು ಸರ್ಕಾರಿ ಆಜ್ಞೆ ಹೊರಡಿಸಿದರು. ಒಂದು ಪೈಸೆ ಕೂಡ ಅದರಲ್ಲಿ ಬಿಡುಗಡೆಯಾಗಲಿಲ್ಲ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದು ವೇಳೆ ಒಂದು ಪೈಸೆಯಾದರೂ ಬಿಡುಗಡೆಯಾಗಿತ್ತು

ಎನ್ನುವುದಾದರೆ, ನಾವು ನೀವು ಹೇಳಿದಂತೆ ಕೇಳುತ್ತೇವೆ. ಆದರೆ ನಮ್ಮ ಸರ್ಕಾರ ಬಂದ ಮೇಲೆ, ಮಾನ್ಯ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಬಂದ ಮೇಲೆ, ನಮ್ಮ ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದ ಮೇಲೆ, ಸಾಕಷ್ಟು ಒತ್ತು ಕೊಟ್ಟು, ಕೆಲಸ ಮಾಡುತ್ತಿದ್ದಾರೆ. ವಿಶೇಷವಾಗಿ ನಮ್ಮ ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರ ಕರ್ನಾಟಕದ ಆ ಭಾಗದಿಂದ ಬಂದವರು. ಮೊದಲಿನ 20 ವರ್ಷದ ಲೋಕ ಅದಾಲತ್ ಕೇಸ್‌ಗಳದ್ದು, ನೂರಾರು ಕೋಟಿ ರೂ.ಗಳು ಬಾಕಿಯಿತ್ತು. ಅದರದ್ದೆಲ್ಲಾ ಸುಮಾರು 213 ಕೋಟಿ ರೂ.ಗಳು payment ಆಯಿತು. 21 ರಿಂದ 23ರವರೆಗೆ ಮುಳುಗಡೆ ಆಗಬೇಕು, ಬಾಗಲಕೋಟೆ ಬಹಳ ಹಾಳಾಗಿದೆ ಎನ್ನುವಂತಹ ಬೇಡಿಕೆಯನ್ನು ನಾವು ಇಟ್ಟಿದ್ದೆವು. ಅದರದ್ದೂ ಕೂಡ ಎಲ್ಲಾ payment ಆಯಿತು. ಅದರ ನಂತರ, ಈಗ ಇನ್ನೂ ಈ Tribunal Order 524.256 ಆದಾಗ, 527ರವರೆಗೆ ನಾವು ಬಾಗಲಕೋಟೆಯನ್ನು acquire ಮಾಡಬೇಕು, 3,688 ಎಕರೆಗಳನ್ನು ಏನೂ ಮಾಡಬಾರದು ಎಂದು ಸರ್ಕಾರಿ ಆಜ್ಞೆ ಮಾಡಿಟ್ಟಿದ್ದಾರೆ. ಅವರು ಮಾನ್ಯ ಜಲ ಸಂಪನ್ಮೂಲ ಸಚಿವರಾಗಿ ಬಂದ ಮೇಲೆ, 4–6 ಸಭೆಗಳನ್ನು, ಬೆಂಗಳೂರಿನಲ್ಲಿ, ಆಲಮಟ್ಟಿಯಲ್ಲಿ, ಬಾಗಲಕೋಟೆಯಲ್ಲಿ ನಡೆಸಿದರು. ಅದಕ್ಕೊಂದು ವಿಶೇಷವಾದಂತಹ ಒತ್ತು ಕೊಟ್ಟು, ನಮ್ಮ ನೀರಾವರಿ ಸಚಿವರು, ನಮ್ಮ ಹಿಂದಿನ ಇಬ್ಬರೂ ಮುಖ್ಯಮಂತ್ರಿಗಳು, ಮಾನ್ಯ ಯಡಿಯೂರಪ್ಪನವರು ಇರಬಹುದು, ಮಾನ್ಯ ಸದಾನಂದಗೌಡರು ಇರಬಹುದು ಅಥವಾ ಇವತ್ತಿನ ಮಾನ್ಯ ಮುಖ್ಯಮಂತ್ರಿಗಳು ಇರಬಹುದು, ಇದಕ್ಕೆ ಹೆಚ್ಚು ಒತ್ತು ಕೊಟ್ಟು, ನಮ್ಮ ಕೃಷ್ಣಾ ಬೇಸಿನ್‌ಗೆ ಸಹಕಾರವನ್ನು ಮಾಡುತ್ತಿದ್ದಾರೆ. ಇದರಲ್ಲಿ ರಾಜಕೀಯ ಮಾಡುವುದು ಬೇಡ ದಯಮಾಡಿ. ಆದರೆ, ಆ ಭಾಗದ ಸಂತ್ರಸ್ತರೇನಿದ್ದಾರೋ, ಅವರ ಬೇಡಿಕೆಗಳಿಗೆ ನಮ್ಮ ಸರ್ಕಾರ ಯಾವ ಕಾಲಕ್ಕೂ ಸ್ಪಂದಿಸಲಾರದಷ್ಟು ಇವತ್ತು ಸ್ಪಂದಿಸಿದೆ. ಮೊದಲನೇ ಮತ್ತು ಎರಡನೇ ಹಂತದ ಕೆಲಸ ಈಗಾಗಲೇ ಹೆಚ್ಚು ಕಡಿಮೆ ಮುಗಿದಿವೆ. ಮೂರನೇ ಹಂತದ ಬಗ್ಗೆ ಗಮನಿಸಬೇಕಾದುದು ಅವರ ಕರ್ತವ್ಯವಾಗಿದೆ. ಇದರ ಬಗ್ಗೆ ಗಮನ ಸೆಳೆದಿದ್ದೂ ಕೂಡ ಒಳ್ಳೆಯದಾಯಿತು. ಆ ನಿಟ್ಟಿನಲ್ಲಿ, ಆದರೆ ಅವರು ಗಮನ ಸೆಳೆಯುವುದಕ್ಕೆ ಮುಂಚೆಯೇ, ಸಾಕಷ್ಟು ಕಾಮಗಾರಿಯನ್ನು ಮತ್ತು ಕ್ರಮಗಳನ್ನು ನಮ್ಮ ಸರ್ಕಾರ ಕೈಗೊಂಡಿದೆ. ನಾವು ಹೋರಾಟ ಮಾಡಿದ್ದರಲ್ಲಿ ಒಂದು ಅರ್ಥವಿತ್ತು. ಏನೂ ಕೆಲಸ ಆಗಿಲ್ಲವೆಂದು

ನಾವು ಹೋರಾಟ ಮಾಡುತ್ತಿದ್ದೆವು. ಇವತ್ತು ಎಲ್ಲಾ ಕೆಲಸ ಆದ ಮೇಲೆ ಅವರು ಹೋರಾಟ ಮಾಡುತ್ತಿದ್ದಾರೆ, ಅದೇ ನಮಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಸರ್ಕಾರ ಎಲ್ಲದಕ್ಕೂ ಸಕಾರಾತ್ಮಕವಾಗಿ ಸ್ಪಂದಿಸಿದ ಮೇಲೆ, ಅಲ್ಲಿ ಉಪವಾಸ ಕುಳಿತುಕೊಳ್ಳುವುದು, ಅಲ್ಲಿ ಪಾದಯಾತ್ರೆ ಮಾಡುವುದು, ಅದರ ಅವಶ್ಯಕತೆಯೇ ಇಲ್ಲ. ನನ್ನ ತಿಳುವಳಿಕೆ ಪ್ರಕಾರ. ಇದಲ್ಲದೆ ಎತ್ತಿನ ಬಂಡಿ ಹೋರಾಟ..

ಅಧ್ಯಕ್ಷರು : ದಯವಿಟ್ಟು ಮುಗಿಸಿ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ : ಇದು ನೀರಾವರಿ ಆಗಬೇಕು ಎನ್ನುವುದಕ್ಕಿಂತ ರಾಜಕೀಯ ವಿಷಯವೇ ಹೆಚ್ಚು ಅಡಕವಾಗಿದೆ ಎಂದು ಅನಿಸುತ್ತದೆ. ದಯಮಾಡಿ...

ಅಧ್ಯಕ್ಷರು : ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ : ಬಿಜಾಪುರ ಜಿಲ್ಲೆಯಾಗಲಿ ಅಥವಾ ಬಾಗಲಕೋಟೆ ಜಿಲ್ಲೆಯಾಗಲಿ ಬೇರೆ ಬೇರೆಯಲ್ಲ. ಎಲ್ಲವೂ ಒಂದೇ ಜಿಲ್ಲೆಯೇ. ನಾವು ಒಂದೇ ಜಿಲ್ಲೆಯವರು. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಸಾರ್, 1964 ರಿಂದ 1983ರವರೆಗೆ 20 ವರ್ಷ ಏನೂ ಆಗಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಸನ್ಮಾನ್ಯ ದೇವೇಗೌಡರು 1983 ರಲ್ಲಿ ನೀರಾವರಿ ಮಂತ್ರಿಗಳಾಗಿದ್ದಾಗ, ಅದಕ್ಕೆ ಚಾಲನೆ ಸಿಕ್ಕಿತು. ಅಲ್ಲಿಯವರೆಗೆ 20 ವರ್ಷಗಳ ಕಾಲ, ಅಲ್ಲಿಯ ಕಡ್ಡಿ ತೆಗೆದು, ಇಲ್ಲಿ ಇಟ್ಟಿರಲಿಲ್ಲ. ನಮಗೆಲ್ಲಾ ಗೊತ್ತಿದೆ. ನಾವೆಲ್ಲಾ ಅಲ್ಲೇ ಬೆಳೆದು ಬಂದವರಾಗಿದ್ದೇವೆ. ದಯಮಾಡಿ, ಇದನ್ನು ರಾಜಕೀಯಕರಣಗೊಳಿಸಬೇಡಿ. ಕಳೆದ ನಾಲ್ಕು ವರ್ಷಗಳಂತೂ ಸಾಕಷ್ಟು ಹಣ ಆ ಭಾಗದಲ್ಲಿ ಬಿಡುಗಡೆಯಾಗಿದೆ, ಸಾಕಷ್ಟು ಅಭಿವೃದ್ಧಿಯಾಗಿದೆ. ಮಾನ್ಯ ಶಾಸಕರೆ, ನೀವು ಬಾಗಲಕೋಟೆಗೆ ಬಂದು ನೋಡಿದರೆ, ನಿಮಗೇ ಆಶ್ಚರ್ಯಪಡುವಂತಹ ಸ್ಥಿತಿ ಇದೆ.. ಆ ದೃಷ್ಟಿಯಲ್ಲಿ ನಮ್ಮ ಸಚಿವರು ಸಾಕಷ್ಟು ಅದರ ಬಗ್ಗೆ ಒತ್ತು ಕೊಟ್ಟು ಕೆಲಸ ಮಾಡುತ್ತಿದ್ದಾರೆ. ನಾವು ಸಹಕಾರ ಕೊಡೋಣ ಎನ್ನುವಂತಹ ಮಾತನ್ನು ಹೇಳುತ್ತೇನೆ. 3ನೇ ಹಂತದ್ದು ಬಹಳ speed up ಆಗಬೇಕು. 27ರವರೆಗೆ ಏನು ಆ ಜಮೀನನ್ನು ನಾವು ಇಟ್ಟಿದ್ದೇವೆ, ಅದರ ಬಗ್ಗೆ immediately 4[1] ಮಾಡಬೇಕು, 4[1] ಆಗದಿದ್ದರೆ, ತೊಂದರೆಯಾಗುತ್ತದೆ ಎನ್ನುವುದನ್ನು ತಮ್ಮ

ಗಮನಕ್ಕೆ ತಂದು, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಬೊಮ್ಮಾಯಿಯವರಿಗೆ ಜಾಸ್ತಿ ದುಡ್ಡು ಕೊಡಬೇಕು. ಆಗ ಮಾತ್ರ ಕೆಲಸವಾಗುತ್ತದೆ. ಮಾನ್ಯ ಚರಂತಿಮಠ್‌ರವರೆ, ಎರಡನೆಯದಾಗಿ tribunal award ಬಂದಿರುವುದು ದಿನಾಂಕ: 30.11.2010 ರಂದು...

(ಗೊಂದಲ)

ಅಧ್ಯಕ್ಷರು : ನಿಮ್ಮದನ್ನೂ ತೆಗೆದುಕೊಳ್ಳುತ್ತೇನೆ. ದಯವಿಟ್ಟು ನೀವು ಬೇಗ ಮಾತನಾಡಿ.

(ಗೊಂದಲ)

ಶ್ರೀ ರಮೇಶ್ ಬಿ. ಭೂಸನೂರ್ (ಸಿಂಧಗಿ) : ಮಾನ್ಯ ಅಧ್ಯಕ್ಷರೆ, 1967 ರಲ್ಲಿ ಈ ಯೋಜನೆ ಪ್ರಾರಂಭವಾಗಿದೆ. ನಾವು ಅಖಂಡ ಬಿಜಾಪುರ ಜಿಲ್ಲೆಯವರು. 2 ಲಕ್ಷ ಎಕರೆಗಳಷ್ಟು ಜಮೀನನ್ನು ನಾವು ಕಳೆದುಕೊಂಡಿದ್ದೇವೆ. ಆದರೆ ವಾಸ್ತವಿಕವಾಗಿ ನಮಗೆ ಇನ್ನೂವರೆಗೆ 2 ಲಕ್ಷ ಎಕರೆಗಳಷ್ಟು ನೀರಾವರಿಯೂ ಸಹ ಆಗಿಲ್ಲ. ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಪ್ರಥಮ ಬಾರಿಗೆ, ಅದರಲ್ಲಿ ಮೂರು ಪ್ರಮುಖ ಏತ ನೀರಾವರಿ ಯೋಜನೆಗಳು, ಗುತ್ತಿ ಬಸವಣ್ಣ ಏತ ನೀರಾವರಿ, ಚಿಮ್ಮಲಗಿ ಏತ ನೀರಾವರಿ ಮತ್ತು ಮುಳವಾಡ ಏತ ನೀರಾವರಿ ತೆಗೆದುಕೊಂಡಿದ್ದಾರೆ. ಈ ಮೂರೂ ಏತ ನೀರಾವರಿ ಯೋಜನೆಗಳನ್ನು ಯಾರು ಪಾರಂಭ ಮಾಡಿದ್ದಾರೆ ಎಂದರೆ, ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಸರ್ಕಾರ, ನಮ್ಮ ಸರ್ಕಾರ ಎಂದು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಜೊತೆಗೆ, ಮೂಲ ನಕಾಶೆ ಪ್ರಕಾರ ಆಗಬೇಕು. ಇವತ್ತು ಆಲಮಟ್ಟಿ ಏನು ಕಟ್ಟಿದರೋ, ನೀರಾವರಿ ಪಿತಾಮಹ ಎನಿಸಿಕೊಂಡ ಬಾಳೇ ಕುಂದ್ರಿಯವರ ಮೂಲ ನಕಾಶೆಯನ್ನು ತಿರುಚಿ ಇವತ್ತು ಹಿಂದಿನ ಸರ್ಕಾರ ನಮ್ಮ ಇಂಡಿ ತಾಲ್ಲೂಕಿಗೆ ಬರಬೇಕಾದಂತಹ ನೀರನ್ನು ಬೇರೆ ಕಡೆಗೆ ಕೊಟ್ಟಿದೆ. ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯಲ್ಲಿ 5 ಟಿಎಂಸಿ ನೀರನ್ನು, ಚಿಮ್ಮಲಗಿ ಏತ ನೀರಾವರಿ ಯೋಜನೆಯ 5 ಟಿಎಂಸಿ ನೀರನ್ನು, ಮುಳವಾಡ ಏತ ನೀರಾವರಿ ಯೋಜನೆಯ 5 ಟಿಎಂಸಿ ನೀರನ್ನು ಮತ್ತು ಮುಳವಾಡ ಏತ ನೀರಾವರಿಯ 2 ಟಿಎಂಸಿ ನೀರನ್ನು, ಒಟ್ಟು 17 ಟಿಎಂಸಿ ನೀರನ್ನು ತಿರುಚಿ, ನಮ್ಮ ಜಿಲ್ಲೆಗೆ ಬರಬೇಕಾದಂತಹ ನೀರಾವರಿಯನ್ನು

ಇವತ್ತು ಬೇರೆ ಜಿಲ್ಲೆಗೆ ಸರ್ಕಾರ ಕೊಟ್ಟಿದೆ. ಹಿಂದಿನ ಸರ್ಕಾರ, ಅದರಲ್ಲೂ ವಿಶೇಷವಾಗಿ ನನ್ನ ಕ್ಷೇತ್ರಕ್ಕೆ ಏನು ಮೂರೂ ಏತ ನೀರಾವರಿ ಯೋಜನೆಗಳು ಬರುತ್ತವೋ, ಆ ಮೂರೂ ಏತ ನೀರಾವರಿಗಳನ್ನು ಮಾನ್ಯ ಜಲ ಸಂಪನ್ಮೂಲ ಸಚಿವರು ಇವತ್ತು ಆದ್ಯತೆ ಕೊಟ್ಟು ಮಾಡುತ್ತಿದ್ದಾರೆ. ಮೂಲ ನಕಾಶೆ ಪ್ರಕಾರ, ಹೇಗೆ ಬಾಳೇಕುಂದ್ರಿಯವರು ಮೂಲ ನಕಾಶೆ ಮಾಡಿದ್ದರೋ, ಅದೇ ಪ್ರಕಾರ ನನಗೆ ಸರ್ಕಾರ ಪರವಾನಿಗೆ ಕೊಟ್ಟು, ಬರುವಂತಹ ದಿನಗಳಲ್ಲಿ ಈ ಚಿಮ್ಮಲಗಿ ಏತ ನೀರಾವರಿ ಯೋಜನೆಯನ್ನು ಮಾಡಬೇಕು. ವಿಶೇಷವಾಗಿ ಎಲ್ಲಕ್ಕಿಂತ ದೊಡ್ಡ ಏತ ನೀರಾವರಿಯಾದ ಚಿಮ್ಮಲಗಿ ಏತ ನೀರಾವರಿಯನ್ನು ಈಗೇನು ಪ್ರಾರಂಭ ಮಾಡಿದ್ದಾರೋ, 30 ಕಿ.ಮೀ. cannel ಆಗಿದೆಯೋ, ಅದನ್ನು ಸಂಪೂರ್ಣ, ಕೊನೆಯ ಹಂತದ ವರೆಗೆ cannel ಅನ್ನು ಮಾಡಿಸಬೇಕು ಮತ್ತು ತಾವು ಶೀಘ್ರ ರೀತಿಯಲ್ಲಿ ಕೆಲಸ ಮಾಡಿದರೆ ತಮಗೆ ನಾನು ಮತ್ತೊಮ್ಮೆ ಧನ್ಯವಾದಗಳನ್ನು ಹೇಳುತ್ತೇನೆ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸಚಿವರಿಂದ ಉತ್ತರ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲ ಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ ನೀರಾವರಿಯ ಬಗ್ಗೆ ಅತ್ಯಂತ ಕಳಕಳಿಯಿಂದ ಎಲ್ಲರೂ ಮಾತನಾಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಅವರವರ ಕ್ಷೇತ್ರದಲ್ಲಿ ಇವತ್ತು ನೀರಾವರಿಯಿಂದ ಮುಳುಗಡೆ ಆಗಿರುವಂತಹ ಸಂತ್ರಸ್ತರ ಬವಣೆ ಒಂದು ಕಡೆ, ನೀರಾವರಿ ಆಗಬೇಕಾಗಿರುವ ಬೇಡಿಕೆ ಒಂದು ಕಡೆ, ಈ ಬವಣೆ ಮತ್ತು ಬೇಡಿಕೆ ನಡುವೆ ಸಮತೋಲನವನ್ನು ಕಾಪಾಡಿಕೊಂಡು ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇವತ್ತು ಕೆಲವು ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಮಾನ್ಯ ಸಿದ್ದು ಸವದಿಯವರು, ಸೊಸಲಟ್ಟಿ ಮತ್ತು ಚಿಮ್ಮಡಿ ಬಗ್ಗೆ ಏನು ಹೇಳಿದ್ದಾರೆ, ಈಗಾಗಲೇ ಅದರ feasibility study ಮಾಡಲಿಕ್ಕೆ ಆದೇಶ ಮಾಡಿದ್ದೇನೆ. ಅದು ಬಂದ ತಕ್ಷಣವೇ ಕ್ರಮವನ್ನು ಜರುಗಿಸುತ್ತೇನೆ. ಮರೋಳದ ಬಗ್ಗೆ ಏನು ದೊಡ್ಡನಗೌಡರು ಹೇಳಿದ್ದಾರೆ. ಈಗಾಗಲೇ ಅವರಿಗೆ ಗೊತ್ತಿದೆ, ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದು micro irrigation ಆಗಿದೆ. ಎರಡನೇ ಹಂತದ್ದೂ ಕೂಡ ತೆಗೆದುಕೊಂಡಿದ್ದೇವೆ. ಮುಂದಿನ ಕ್ಯಾಬಿನೆಟ್‌ನಲ್ಲಿ ಅದು ಬರುತ್ತಿದೆ. ಅದನ್ನು ನಾವು approve ಮಾಡಿಸಿಕೊಂಡು, ಆ ಕೆಲಸವನ್ನೂ

ಕೂಡ ಮಾಡುತ್ತಿದ್ದೇವೆ. ಇಂಡಿ ಬಗ್ಗೆ ಏನು ಹೇಳಿದ್ದಾರೋ, ಅದರ ಬಗ್ಗೆ ಈಗಾಗಲೇ ಹಲವಾರು ಬಾರಿ ಚರ್ಚೆಯಾಗಿದೆ. ನಮ್ಮ ತಾಂತ್ರಿಕ ಸಲಹೆಯನ್ನು ತೆಗೆದುಕೊಂಡು, ಆ ಬಗ್ಗೆ ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ.

ನಮ್ಮ ಮಿತ್ರರು ಗ್ಲೋಬಲ್ ಟೆಂಡರ್ ಬಗ್ಗೆ ಯಾವಾಗಲೂ ದೊಡ್ಡ ಯೋಜನೆಗಳ ಬಗ್ಗೆ ದೊಡ್ಡ ರೀತಿಯಲ್ಲಿ ಯೋಚನೆ ಮಾಡುವಂಥವರು. ಖಂಡಿತವಾಗಿಯೂ ನಮ್ಮ ಹಣಕಾಸಿನ ಒಂದು ಇತಿಮಿತಿಗಳನ್ನು ನೋಡಿ ಕೊಂಡು ಎಲ್ಲೆಲ್ಲಿ ಸಾಧ್ಯವಿದೆ, ಅದನ್ನು ಯಾವ ರೀತಿ ಮಾಡಬೇಕು, ಏಕೆಂದರೆ, ಗ್ಲೋಬಲ್ ಟೆಂಡರ್ ಎಂದರೆ Private Public Participation ಮಾಡಬೇಕಾ, ಅಷ್ಟು ಹಣವನ್ನು ಒಂದೇ ಸಾರಿ ಇಡುವುದಕ್ಕೆ ಸಾಧ್ಯವೇ? ಈ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ನೋಡಿಕೊಂಡು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ಖಂಡಿತಾ ಮಾಡುತ್ತೇವೆ. ಎಂ.ಬಿ. ಪಾಟೀಲ್ ಅವರು ಕೆಲವು ಸಲಹೆಗಳನ್ನು ಹೇಳಿದ್ದಾರೆ, ಅವುಗಳನ್ನು ಕೂಡ ಪರಿಶೀಲನೆ ಮಾಡುತ್ತೇನೆ. ಬಬಲೇಶ್ವರ್ ಅವರೇ ಈಗಾಗಲೇ ನಿಮಗೆ ಗೊತ್ತಿದೆ ನೀರನ್ನು ಒದಗಿಸಿ DPR ಮಾಡುವುದಕ್ಕೂ ಕೂಡ ನಾನು ಆಜ್ಞೆ ಮಾಡಿದ್ದೇನೆ. ಇದರ ಬಗ್ಗೆ ನಮ್ಮ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿ ಇದೆ, ಅವರು ಯಾವ ಹೈಟ್‌ವರೆಗೆ ಆ ಮುಳುಗಡೆಯನ್ನು ತೆಗೆದುಕೊಳ್ಳಬೇಕೆನ್ನುವುದನ್ನು ಹೇಳುವುದು ಬಹಳಷ್ಟು ಪ್ರಾಕ್ಟಿಕಲ್ ಇದೆ, ಆ ಸಮಿತಿಯ ಶಿಫಾರಸ್ಸಿನ ಅನ್ವಯ ಮುಂದಿನ ಕ್ರಮವನ್ನು ಖಂಡಿತವಾಗಿಯೂ ತೆಗೆದುಕೊಂಡು ಆ ಪ್ರಕಾರ ನಾವು 4(1), 6(1) ಕೂಡ ಮಾಡುತ್ತೇವೆ. ಬಹಳ ಬರಗಾಲ ಪೀಡಿತ ಕೊಪ್ಪಳದ 11 ಟಿಎಂಸಿ ನೀರಿನ ಸರ್ವೆ ಕಾರ್ಯ ಈಗಾಗಲೇ ಪ್ರಗತಿಯಲ್ಲಿದೆ, ಅವರು ನೋಡಿದ್ದಾರೆ, ಆದಷ್ಟು ಬೇಗ ಆ ಕೆಲಸವನ್ನು ಮಾಡುತ್ತೇವೆ. ಒಟ್ಟಾರೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದ್ದ ಈ ಟ್ರಿಬ್ಯುನಲ್ ಆದೇಶವಾದ ಮೇಲೆ ಏನೆಲ್ಲಾ ಚಾಲನೆಯನ್ನು ಕೊಡಬೇಕೋ ಅದನ್ನು ಕೊಡುತ್ತೇವೆ. ಟ್ರಿಬ್ಯುನಲ್ ಆದ ತಕ್ಷಣವೆ ನಮ್ಮ ಸರ್ಕಾರ ಕ್ರಮವನ್ನು ಜರುಗಿಸಿದೆ, ಯೋಜನೆಯನ್ನು ರೂಪಿಸಿ ಹಣವನ್ನು ಕೊಟ್ಟಿದೆ, ಟಾರ್ಗೆಟ್ ಅನ್ನು ಕೂಡ ಮಾಡುತ್ತಿದ್ದೇವೆ.